ಭಾರತ ಯಾತ್ರಾ ಕೇಂದ್ರ

ರಂಗಸೌರಭ

ಅರ್ಪಿಸುವ

# ಸೌರಭ 2020

ರವೀಂದ್ರ ಕಲಾಕ್ಷೇತ್ರ

02 FEB 2020
10 FEB 2020

# ಪ್ರಶಸ್ತಿ ಸಂಚಿಕೆ

## ಜ್ಞಾನಭಾರತಿ, ಉಮೇಶ್‌ರುದ್ರ ಮತ್ತು ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಪಾರಿತೋಷಕ

## ಅಂತರ ಕಾಲೇಜು ರಂಗಸ್ಪರ್ಧೆಗಳು – 2020

ಸಹಯೋಗ

ಕರ್ನಾಟಕ ನಾಟಕ ಅಕಾಡೆಮಿ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

# ಪರಿವಿಡಿ


| | |
|---|---|
| ಭಾರತ ಯಾತ್ರಾ ಕೇಂದ್ರ ಪರಿಚಯ | 01 |
| ರಂಗ ಸೌರಭ ಪರಿಚಯ | 02 |
| ಸೌರಭ – 20 ಪರಿಚಯ | 03 |
| ಭಾರತ ಯಾತ್ರಾ ಕೇಂದ್ರ | 04 |
| ರಂಗ ಸೌರಭ ಸಮಿತಿ | 05 |
| ಉತ್ಸವ ಸಮಿತಿ | 06 |
| ತೀರ್ಪುಗಾರರ ಮಂಡಳಿ | 08 |
| ತೀರ್ಪುಗಾರರ ಅನಿಸಿಕೆ | 09 |
| ಸೌರಭ ೨೦ – ಭಾಗವಹಿಸಿದ ನಾಟಕಗಳು | 10 |
| ಸೌರಭ ೨೦ – ಪ್ರಶಸ್ತಿ – ಪಾರಿತೋಷಕಗಳು | 26 |
| ಸೌರಭ ೨೦ ವಿಜೇತರ ಪಟ್ಟಿ | 27 |
| ಸೌರಭ ೨೦ ವೇಳಾಪಟ್ಟಿ | 31 |
| ಸೌರಭ ೨೦ ಉದ್ಘಾಟನಾ ಸಮಾರಂಭ | 33 |
| ಸೌರಭ ೨೦ ಸಂಸ ಪ್ರಶಸ್ತಿ | 34 |
| ಸೌರಭ ೨೦ ಡಾ. ಡಿ. ಕೆ. ಚೌಟ ಪ್ರಶಸ್ತಿ | 35 |
| ಸೌರಭ ೨೦ ಗ್ಯಾಲರಿ | 36 |
| ಸೌರಭ ೨೦ ಪಾರಿತೋಷಕ ವಿಜೇತರು | 37 |
| ಕೃತಜ್ಞತೆಗಳು | 41 |

# ಭಾರತ ಯಾತ್ರಾ ಕೇಂದ್ರ

ಭಾರತ ಯಾತ್ರಾ ಕೇಂದ್ರವನ್ನು ಭಾರತದ ಮಾಜಿ ಪ್ರಧಾನಿ ಚಂದ್ರಶೇಖರ್‌ರವರ ಆಶಯದಂತೆ ಕರ್ನಾಟಕ ಸಂದರ್ಭದಲ್ಲಿ ಸಾಂಸ್ಕೃತಿಕ ವಿಭಾಗವನ್ನಾಗಿ ಪ್ರಾರಂಭಿಸಲಾಯಿತು. ರಾಷ್ಟ್ರದಾದ್ಯಂತ ಹಲವಾರು ರಾಜ್ಯಗಳಲ್ಲಿ ಸಾಮಾಜಿಕ ಸೇವೆಗಳ ವಿವಿಧ ಶಾಖೆಗಳೊಂದಿಗೆ ಕೆಲಸ ಮಾಡುತ್ತಿರುವ ಭಾರತ ಯಾತ್ರಾ ಕೇಂದ್ರವು ಕೇರಳ, ತಮಿಳುನಾಡು, ಉತ್ತರ ಪ್ರದೇಶ, ರಾಜಾಸ್ಥಾನ, ಬಿಹಾರ, ದೆಹಲಿ, ಮಹಾರಾಷ್ಟ್ರ, ಆಂಧ್ರ ಪ್ರದೇಶ... ಮುಂತಾದ ರಾಜ್ಯಗಳಲ್ಲಿ ಅನೇಕ ಜನೋಪಯೋಗಿ ಹಾಗೂ ಸಾಂಸ್ಕೃತಿಕ ಜಾಗೃತಿಯನ್ನುಂಟು ಮಾಡುವ ಕೆಲಸಗಳನ್ನು ನಿರ್ವಹಿಸಿಕೊಂಡು ಬರುತ್ತಿವೆ. ಕರ್ನಾಟಕದ ಶಾಖೆಯು 1984ರಲ್ಲಿ ಬಿ. ಎಲ್. ಶಂಕರ್‌ರವರ ನೇತೃತ್ವದಲ್ಲಿ ಪ್ರಾರಂಭವಾಯಿತು. ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಪುಸ್ತಕ ಹಾಗೂ ಶಾಲಾ ಸಮವಸ್ತ್ರ ವಿತರಣೆ ಮತ್ತು ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸಿಕೊಡುವ ಕಾರ್ಯಕ್ರಮದೊಡನೆ ಪ್ರಾರಂಭವಾದ ಈ ಶಾಖೆಯು ಇಂದು ರಾಷ್ಟ್ರದಲ್ಲಿಯೇ ಒಂದು ಪ್ರಮುಖ ಸಾಂಸ್ಕೃತಿಕ ಸಂಘಟನೆಯಾಗಿ ರೂಪುಗೊಂಡಿದೆ.

ಇಂದಿನ ಪರಿಸರ ಮತ್ತು ನಗರಗಳಲ್ಲಿ ದೈನಂದಿನ ಯಾಂತ್ರಿಕ ಕ್ರಿಯೆಗಳು ವಿದ್ಯಾರ್ಥಿಗಳ ಮುಗ್ಧ ಮನಸ್ಸಿನ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವನ್ನು ಬೀರಲು ಕಳೆದ ಎರಡು ದಶಕಗಳಿಂದ ನಿರಂತರ ಯತ್ನಿಸುತ್ತಿರುವುದು ಎಲ್ಲರಿಗೂ ವೇದ್ಯವಾಗಿರುವ ಸಂಗತಿ. ಕನ್ನಡ ಸಾಂಸ್ಕೃತಿಯ ವಿವಿಧ ಪ್ರಕಾರಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವ ದೃಷ್ಟಿಯಿಂದ ಕಳೆದ 29 ವರ್ಷಗಳಿಂದ ರಂಗಭೂಮಿ ಕಾರ್ಯಾಗಾರಗಳು, ಸಂಸ್ಕೃತಿ ಶಿಬಿರಗಳು, ಅಂತರ ಕಾಲೇಜು ರಂಗಸ್ಪರ್ಧೆಗಳು, ಕವಿಗೋಷ್ಠಿ, ವಿಚಾರ ಗೋಷ್ಠಿ, ಪುಸ್ತಕ ಪ್ರಕಟಣೆ... ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ಭಾರತ ಯಾತ್ರಾ ಕೇಂದ್ರ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಇದಕ್ಕಾಗಿ ಶ್ರಮಿಸುತ್ತಿರುವ ಭಾರತ ಯಾತ್ರಾ ಕೇಂದ್ರ ಮತ್ತು ಪ್ರಯೋಗರಂಗದ ಎಲ್ಲ ಕಲಾವಿದರಿಗೆ, ಜೊತೆಗೆ ಕಾಲೇಜು ಉತ್ಸವದ ಸಂದರ್ಭದಲ್ಲಿ ಅಹರ್ನಿಶಿ ದುಡಿಯುವ ಎಲ್ಲ ಕಾಲೇಜುಗಳ ಆಡಳಿತ ವರ್ಗದವರ ಸಹಕಾರವನ್ನು ಭಾರತ ಯಾತ್ರಾ ಕೇಂದ್ರ ಎಂದಿಗೂ ಮರೆಯಲು ಸಾಧ್ಯವಿಲ್ಲ.

ಭಾರತ ಯಾತ್ರಾ ಕೇಂದ್ರದ ಚಟುವಟಿಕೆಗಳನ್ನು ಕೇವಲ ಬೆಂಗಳೂರಿಗಷ್ಟೇ ಸೀಮಿತಗೊಳಿಸದೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಯಾವುದೇ ಸಾಮಾಜಿಕ ಸಮಸ್ಯೆಗಳಾಗಿರಲಿ, ಅದಕ್ಕೆ ಸದಾ ಸ್ಪಂಧಿಸುವ ಕೇಂದ್ರವಾಗಿ ಭಾರತ ಯಾತ್ರಾ ಕೇಂದ್ರವನ್ನು ಜಿಲ್ಲಾ ಸಂಚಾಲಕರುಗಳು ರೂಪಿಸಿದ್ದಾರೆ. ತಮ್ಮ ವ್ಯಾಪ್ತಿಯ ಯಾವುದೇ ಸಾಮಾಜಿಕ ಸಮಸ್ಯೆಗಳಿಗೆ ಸದಾ ಸ್ಪಂಧಿಸುವ ಕೇಂದ್ರವಾಗಿ ಭಾರತ ಯಾತ್ರಾ ಕೇಂದ್ರಗಳನ್ನು ರೂಪಿಸುತ್ತಿದ್ದಾರೆ. ಸ್ವತಃ ಗಾಯಕರಾಗಿ, ಹಳ್ಳಿ ಹಳ್ಳಿಗಳಲ್ಲಿ ತಮ್ಮದೇ ಆದ ತಂಡವನ್ನು ಕಟ್ಟಿಕೊಂಡು, ಜನಪರ ಹೋರಾಟಗಳಿಗೆ ಸಾಂಸ್ಕೃತಿಕ ಸ್ವರೂಪವನ್ನು ನೀಡಿದ್ದಾರೆ. ಈಗಾಗಲೇ ಹಲವು ನಾಟಕೋತ್ಸವ ಮತ್ತು ಸಂಗೀತೋತ್ಸವಗಳನ್ನು ಇತರ ಸಂಘಟನೆಗಳ ಸಹಕಾರಗೊಂದಿಗೆ ರೂಪಿಸಿದ್ದಾರೆ ಹೀಗೆ ಎಲ್ಲ ಜಿಲ್ಲೆಗಳಲ್ಲೂ ಅರಳುತ್ತಿರುವ ಈ ಸಾಂಸ್ಕೃತಿಕ ಚಳುವಳಿಗೆ ಕಲಾವಿದರ ಮತ್ತು ಪ್ರಗತಿಪರರುಗಳಿಂದ ದೊರೆಯುತ್ತಿರುವ ಬೆಂಬಲ ನಿಜಕ್ಕೂ ಸ್ವಾಗತಾರ್ಹವಾಗಿದೆ.

**– ಬಿ. ಎಲ್. ಶಂಕರ್**

**ಅಧ್ಯಕ್ಷರು**

# ರಂಗ ಸೌರಭ

ಕನ್ನಡ ನಾಡು ಪ್ರದರ್ಶನ ಕಲೆಗಳ ಶ್ರೀಮಂತ ಇತಿಹಾಸ ಹೊಂದಿದ ಬೀಡು, ಜಾನಪದ ಕಲೆಗಳು ಹಳ್ಳಿಗಳ ಕಣ ಕಣದಲ್ಲಿ ಬೆರೆತಿವೆ. ಒಂದೆಡೆ ಔದ್ಯೋಗಿಕ ಕ್ರಾಂತಿ ಮತ್ತೊಂದೆಡೆ ಪಾಶ್ಚಾತ್ಯ ಸಂಸ್ಕೃತಿಯ ಕುರುಡು ಅನುಕರಣೆ, ಇವರೆಡರ ನಡುವಿನ ಹೊಯ್ದಾಟದಲ್ಲಿ ಇಂದಿನ ಪೀಳಿಗೆ ಅಕ್ಷರಶಃ ಹೈರಾಣಾಗಿದೆ. ಸಿಲಿಕಾನಿನ ಹೊಳಪು ಹೆಚ್ಚಿದಂತೆಲ್ಲಾ ಪ್ರದರ್ಶನ ಕಲೆಗಳ ಪರಂಪರೆ ಮುಸುಕಾಗುತ್ತಿರುವುದು ಕಳವಳಕಾರಿಯಾಗಿದೆ. ನೀರಿನಲ್ಲಿ ಮುಳುಗುವವನಿಗೆ ಹುಲುಕಡ್ಡಿ ಆಸರೆ ಎಂಬಂತೆ, ಹವ್ಯಾಸಿ ರಂಗಭೂಮಿ ಈ ಸಮಾಜದಲ್ಲಿ ಸಂಜೀವಿನಿಯಾಗಿ ಮೈದಳೆಯುತ್ತಿದೆ.

1999ರಲ್ಲಿ ಪ್ರಾರಂಭವಾದ 'ರಂಗ ಸೌರಭ' ಇಂಥ ಕಲಾ ಸಂಜೀವಿನಿಯಲ್ಲೊಂದು. ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿರುವ ಬಿ.ಎಚ್.ಎಸ್.ಪ್ರಥಮ ದರ್ಜೆ ಕಾಲೇಜು ಇಂದಿನ ವಿಜಯ ಕಾಲೇಜಿನ ಅಸಂಖ್ಯಾತ ರಂಗಾಸಕ್ತರ ಕನಸುಗಳ ಸಾಕಾರರೂಪವೇ ಈ "ರಂಗ ಸೌರಭ". ವಿದ್ಯಾರ್ಥಿ ರಂಗಬಳಗವಾಗಿ ಪ್ರಾರಂಭವಾದ ಈ ತಂಡ ಇಂದು ಕರ್ನಾಟಕದ ರಂಗವೇದಿಕೆಯ ಉತ್ತಮ ತಂಡಗಳಲ್ಲಿ ಒಂದಾಗಿದೆ. ರಂಗ ಸೌರಭದ ಅನೇಕ ಸದಸ್ಯರು ರಂಗಭೂಮಿ, ಕಿರುತೆರೆ ಮತ್ತು ಹಿರಿತೆರೆಗಳಲ್ಲಿ ನಟ, ನಿರ್ದೇಶಕ ಹಾಗೂ ತಂತ್ರಜ್ಞರಾಗಿ ಬದುಕು ಕಟ್ಟಿಕೊಂಡಿದ್ದಾರೆ.

1999ರಲ್ಲಿ "ಅಧೋರಕ್ತಿ" ಎನ್ನುವ ನಾಟಕದ ಮೂಲಕ ತನ್ನ ರಂಗಪಯಣವನ್ನು ಪ್ರಾರಂಭಿಸಿದ ರಂಗಸೌರಭ, ಕಳೆದ 20 ವರ್ಷಗಳಲ್ಲಿ ದೇಶದಾದ್ಯಂತ 13 ಕ್ಕೂ ಹೆಚ್ಚು ನಾಟಕಗಳನ್ನು ಪ್ರದರ್ಶಿಸಿದೆ.

2010ರಲ್ಲಿ "ಶಸ್ತ್ರ ಪರ್ವ" ನಾಟಕ ಹರಿಯಾಣದ ರೊಹ್‌ತಕ್ ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಅಂತರ ವಿಶ್ವವಿದ್ಯಾಲಯ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದರೆ, "ಮೈಸೂರು ಮಲ್ಲಿಗೆ" ಮತ್ತು "ಗಂಗಾವತರಣ" ನಾಟಕಗಳು 75ಕ್ಕು ಹೆಚ್ಚು ಪ್ರದರ್ಶನಗಳನ್ನು ನೀಡಿ ರಾಜ್ಯ ಮತ್ತು ದೇಶದ ಹಲವಾರು ಭಾಗಗಳಲ್ಲಿನ ರಂಗಾಸಕ್ತರ ಹೃನ್ಮನಗಳನ್ನು ತಣಿಸಿ ತಮ್ಮ ಯಶೋಗಾಥೆಯನ್ನು ಮುಂದುವರೆಸಿವೆ.

ರಂಗ ಸೌರಭ ಪ್ರಾರಂಭವಾಗಿ 20 ವರ್ಷ ಉರುಳಿವೆ, ಈ 20 ವರುಷಗಳಲ್ಲಿ ರಂಗಸೌರಭ ಅಕ್ಷರಶಃ ಕುಟುಂಬವಾಗಿ ಪರಿವರ್ತನೆಯಾಗಿದೆ. ಪರಸ್ಪರ ಗೌರವ, ಸ್ನೇಹ, ಪ್ರೀತಿ ಮತ್ತು ನಿಃಸ್ವಾರ್ಥ ಮನೋಭಾವ ರಂಗಸೌರಭದ ಆತ್ಮವಾಗಿದೆ.

**– ಡಿ. ಎನ್. ವೆಂಕಟರಾವ್**

**ಅಧ್ಯಕ್ಷರು**

ಫ್ರೆಂಚ್ ಕಲಾವಿದನ ಈ ಮಾತು ಇಂದಿಗೂ ಪ್ರಸ್ತುತ. ಒಂದರ್ಥದಲ್ಲಿ ಕಲಾವಿದನ ಜತೆಯಲ್ಲಿಯೇ ಪ್ರೇಕ್ಷಕನೂ ಕೂಡ ಜನಿಸುತ್ತಾನೆ. ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳನ್ನು ಕೌಶಲ್ಯಯುತ ತಂತ್ರಜ್ಞರನ್ನಾಗಿಸುತ್ತಿದೆಯೇ ಹೊರತು, ಮೌಲ್ಯಯುಕ್ತ ಮನುಜರನ್ನಗಲ್ಲ. ಆದರ್ಶ ಸಮಾಜದ ಪರಿಕಲ್ಪನೆಯ ತಳಹದಿ ಮೌಲ್ಯಗಳೇ ಹೊರತು ತಾಂತ್ರಿಕತೆ ಅಲ್ಲ ಅನ್ನೋದು ಮನಗಾಣಬೇಕಿದೆ. ವ್ಯಕ್ತಿ ಹಾಗೂ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿ ಆಗಬೇಕಿದ್ದಲ್ಲಿ, ಅದು ಕಲೆ ಮತ್ತು ರಂಗಭೂಮಿಯಿಂದಷ್ಟೇ ಸಾಧ್ಯ. ಈ ಹಿನ್ನಲೆಯಲ್ಲಿ ಗಮನಿಸಿದರೆ, ರಂಗಭೂಮಿ ಸಮಾಜಕ್ಕಲ್ಲ, ಸಮಾಜಕ್ಕೆ ರಂಗಭೂಮಿಯ ಅನಿವಾರ್ಯತೆ ಹೆಚ್ಚಿದೆ.

ಈ ಹಿಂದೆ, ಭಾರತ ಯಾತ್ರಾ ಕೇಂದ್ರದ ಸಾರಥ್ಯದಲ್ಲಿ ನಡೆಯುತ್ತಿದ್ದ ರಾಜ್ಯಮಟ್ಟದ ಕಾಲೇಜು ನಾಟಕ ಸ್ಪರ್ಧೆಯು ರಾಜ್ಯದ ಕಾಲೇಜು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ದೃಷ್ಟಿಕೋನ ಮತ್ತು ಸಹೋದರತ್ವದ ಕೃಷಿ ಮಾಡುತ್ತಿತ್ತು. ರಂಗಭೂಮಿಲ್ಲಿ ಮೌನಕ್ರಾಂತಿಯೆಬ್ಬಿಸಿದ್ದ ಭಾರತ ಯಾತ್ರಾ ಕೇಂದ್ರವು, ರಂಗಸೌರಭದ ಜತೆಗೆ ಅಸಂಖ್ಯಾತ ಕಾಲೇಜು ರಂಗ ತಂಡಗಳ ಉಗಮಕ್ಕೆ ನಾಂದಿಯಾಗಿತ್ತು. ವಿದ್ಯಾರ್ಥಿ ಹಾಗೂ ರಂಗಭೂಮಿಯ ಬಾಂಧವ್ಯದ ಬೆಸುಗೆಯಾಗಿದ್ದ ಈ ಸ್ಪರ್ಧೆ ಕೆಲವು ವರ್ಷಗಳಿಂದ ನಿಂತುಹೋಗಿತ್ತು.

ಈ ಹಿನ್ನೆಲೆಯಲ್ಲಿ ರಂಗ ಸೌರಭ, ಕಾಲೇಜು ನಾಟಕೋತ್ಸವವನ್ನು ಸಂಘಟಿಸುತ್ತಿದ್ದ ಭಾರತ ಯಾತ್ರ ಕೇಂದ್ರದೊಡನೆ ಕೈಜೋಡಿಸಿ, ಹೊಸ ಚಿಗುರು, ಹಳೆ ಬೇರಿನೊಡಗೂಡಿ ಮತ್ತೊಮ್ಮೆ ರಾಜ್ಯ ಮಟ್ಟದ ಕಾಲೇಜು ನಾಟಕ ಸ್ಪರ್ಧೆಯನ್ನು ಆಯೋಜಿಸುವ ಮೂಲಕ ಪ್ರತಿಭಾ ಕೃಷಿಗೆ ಮುಂದಡಿಯಿಟ್ಟಿದೆ. 2020ರ ಫೆಬ್ರವರಿ 03ರ ರಿಂದ 09ರ ವರೆಗೆ 'ಸೌರಭ 20' ಹೆಸರಿನಡಿಯಲ್ಲಿ, ನಡೆಯುವ ಈ ರಂಗಪರ್ವದಲ್ಲಿ ನಾಟಕ, ಮೂಕಾಭಿನಯ, ಏಕಪಾತ್ರಾಭಿನಯ, ಚಿತ್ರಕಲೆ ಮುಂತಾದ ಸ್ಪರ್ಧೆಗಳಿಂದ ವಿದ್ಯಾರ್ಥಿಗಳ ಕಲಾಪ್ರತಿಭೆಯನ್ನು ಒರೆ ಹಚ್ಚಲಿದೆ.

ಈ ಎಲ್ಲಾ ಸ್ಪರ್ಧೆಗಳಿಗೆ ಆಯಾ ಪ್ರಾಕಾರಗಳಲ್ಲಿಯೇ ನೈಪುಣ್ಯತೆ ಪಡೆದ ಕಲಾ ಶಿರೋಮಣಿಗಳು ತೀರ್ಪುಗಾರರಾಗಿ ಆಗಮಿಸಿ ವಿದ್ಯಾರ್ಥಿಗಳ ಪ್ರತಿಭೆಗೆ ನೀರೆರೆಯಲ್ಲಿದ್ದಾರೆ. ಚಿತ್ರರಂಗದ ದಿಗ್ಗಜರು ಹಾಗೂ ರಾಜಕೀಯ ವಲಯದ ನಾಯಕರು ಅತಿಥಿಗಳಾಗಿ ಆಗಮಿಸಿ ಕಲೆಯ ಪ್ರೋತ್ಸಾಹಿಸುವ ಕೆಲಸ ಮಾಡಲಿದ್ದಾರೆ.

**– ಕೆ. ವಿ. ನಾಗರಾಜಮೂರ್ತಿ**
**ಪ್ರಧಾನ ಕಾರ್ಯದರ್ಶಿ**
**ಭಾರತ ಯಾತ್ರಾ ಕೇಂದ್ರ**

ಅಧ್ಯಕ್ಷರು

**ಬಿ. ಎಲ್. ಶಂಕರ್**

ಪ್ರಧಾನ ಕಾರ್ಯದರ್ಶಿ

**ಕೆ. ವಿ. ನಾಗರಾಜಮೂರ್ತಿ**

ಧರ್ಮದರ್ಶಿಗಳು

**ವಿ. ಸೋಮಣ್ಣ**

**ಎಂ. ಕೃಷ್ಣಪ್ಪ**

**ಡಾ. ರಾಜೀವ್ ರಾಯ್**

ಸಂಚಾಲಕರು

**ಪಿ. ಧನಂಜಯ**

**ಜಗದೀಶ್ ಜಾಲ**

ಜಿಲ್ಲಾ ಸಂಚಾಲಕರು

**ಎಂ. ಜೆ. ದೀಪಕ್ (ಚಿಕ್ಕಮಗಳೂರು)**

**ಸೂಗೂರೇಶ ಅಸ್ಕಿಹಾಳ್ (ರಾಯಚೂರು)**

**ಮಯಾಬ್ರಹ್ಮಚಾರ್ (ಬೆಂಗಳೂರು)**

**ರಂಗಸ್ವಾಮಿ (ಬೆಂಗಳೂರು)**

**ಸಿ.ಎಂ. ನರಸಿಂಹಮೂರ್ತಿ (ಚಾಮರಾಜನಗರ)**

**ಬಸವಲಿಂಗಯ್ಯ ಹಿರೇಮಠ (ಧಾರವಾಡ)**

**ಸುಕುಮಾರ ಮುದ್ರಾಡಿ (ಉಡುಪಿ)**

**ಪ್ರಸಾದ್ ಸುಳ್ಯ (ದಕ್ಷಿಣ ಕನ್ನಡ)**

**ಮಲ್ಲಿಕಾರ್ಜುನ್ ( ಕೋಲಾರ)**

**ಅಡದ್ದಂಡ ಕಾರ್ಯಪ್ಪ (ಕೊಡಗು)**

ಅಧ್ಯಕ್ಷರು

**ಡಿ. ಎನ್. ವೆಂಕಟರಾವ್**

ನಿವೃತ್ತ ಪ್ರಾಂಶುಪಾಲರು

ವಿಜಯ ಕಾಲೇಜು, ಜಯನಗರ

(ಪೂರ್ವದಲ್ಲಿ ಬಿ. ಹೆಚ್. ಎಸ್. ಪ್ರಥಮ ದರ್ಜೆ ಕಾಲೇಜು)

ಕಾರ್ಯದರ್ಶಿ

**ಎ. ಪದ್ಮನಾಭ**

ಪ್ರಾಂಶುಪಾಲರು

ಪಿ. ಆರ್. ಎಂ. ಕಾಲೇಜು, ಟಿ. ನರಸೀಪುರ

ಖಜಾಂಚಿ ಹಾಗು ಸಂಚಾಲಕರು

**ಆರ್. ಪಿ. ಉಮಾಶಂಕರ**

ಪ್ರಾಂಶುಪಾಲರು

ಬೇಸ್ ಪಿ. ಯು. ಕಾಲೇಜು, ಅರಕೆರೆ

ಬನ್ನೇರುಘಟ್ಟ ರಸ್ತೆ

# ಉತ್ಸವ ಸಮಿತಿ

### ಪ್ರಧಾನ ಸಂಚಾಲಕರು

**ಕೆ. ವಿ. ನಾಗರಾಜಮೂರ್ತಿ**

**ಡಿ. ಎನ್. ವೆಂಕಟರಾವ್**

**ಡಾ. ನಾಗೇಶ್ ಬೆಟ್ಟಕೋಟೆ**

### ಸಂಚಾಲಕರು

**ಎ. ಪದ್ಮನಾಭ**

**ಆರ್. ಪಿ. ಉಮಾಶಂಕರ**

**ಜಗದೀಶ್ ಜಾಲ**

### ಸಂಯೋಜಕರು

**ರಂಗಸ್ವಾಮಿ**

**ಮಹೇಶ್**

**ದಿಲೀಪ್**

**ಪ್ರಮೋದ್ ಕೆ. ಶೆಟ್ಟಿ**

**ನವೀನ್ ಎಂ. ಜಿ.**

**ವಲ್ಲಭ ಸೂರಿ**

**ಸುನಿಲ್ ಕುಮರ್ ವಿ.**

**ವಿಜಯ್ ಡಿ. ಜೆ.**

**ಚಿತ್ತರಂಜನಾ ಕಶ್ಯಪ್**

**ಅನಿರುದ್ಧ ವೇದಂತಿ**

**ಗೌತಮ್ ಉಪಾಧ್ಯಾಯ**

### ತಾಂತ್ರಿಕ ಸಹಾಯ

**ಪ್ರಸಾದ್ ಸೋಮಶೇಖರ್, ಸುನಿಲ್ ಶಾಸ್ತ್ರಿ**

**ಮಧುಕರ್ ಬಿ. ವಿ., ಸರ್ವಾಣಿ, ರಾಕೇಶ್**

**ಭರತ್ ಶಾಸ್ತ್ರಿ (ಮಾಧ್ಯಮ)**

# ಉತ್ಸವ ಸಮಿತಿ

## ನಿರ್ವಾಹಕರು

1. ದೀಪಕ್ ಮೂರ್ತಿ
2. ಶಿಲ್ಪಾ ಶ್ಯಾಮ್‌ಕುಮಾರ್
3. ಪ್ರತಿಮಾ ಅತ್ರೇಯಾ
4. ಶ್ರೀಧರ್ ಕುಮಾರ್
5. ಸತೀಶ್ ಪುಟ್ಟಸ್ವಾಮಿ
6. ಸ್ಯಾಮುಯೆಲ್ ಪ್ರೀತಮ್
7. ರಮೇಶ್ ಗೌಡ
8. ದೀಪಕ್ ಟಿ. ಕೆ.
9. ಹೇಮಾ ಬಿ. ಎ.
10. ಭೂಷಣ್ ಜೆ. ಗೌಡ
11. ಭರತ್ ಎಸ್. ಡಿ.
12. ಜಿತೇಂದ್ರ ಧರ್ಮಟ್ಟಿ
13. ಶ್ರೀಕಂಠ ಶ್ರೌತಿ
14. ಶಶಾಂಕ್ ಎಂ. ಸಿ.
15. ಭವಾನಿ ಯು. ಜಿ.
16. ಶ್ವೇತಾ ಅತ್ರೆ
17. ಅಂಕಿತಾ ಕೆ. ಆರ್.
18. ಭರತ್ ವಸಿಷ್ಠ
19. ಕಿರಣ್ ಎನ್. ಗೌಡ
20. ಹೇಮಂತ್ ಸೂರಿ
21. ಚಂದನ್ ಶಂಕರ್
22. ರಾಕೇಶ್ ಎಂ.
23. ಶರತ್ ಜಿ. ಆರ್.
24. ಮನಸ್ ಸಂಪತ್
25. ಸೌಮ್ಯಾ ಹೆಗಡೆ
26. ಮುರಳಿ ಬಿ. ಎಸ್.
27. ಮಾರುತೇಶ್ ವಿ. ಎಮ್.
28. ಪ್ರಶಾಂತ್ ಬದ್ನಿಕೈ
29. ಭವ್ಯ ಮೇಲಾಡಿ
30. ಕೊಯೆಲ್ ಸುದೀಪ್ತ
31. ಶೃತಿ ಶಿವಶಂಕರ್
32. ಆಶಾ ಬಸವರಾಜ್
33. ಪೂಜಾ ಉಮಾಶಂಕರ್
34. ನವ್ಯ
35. ವೈಷ್ಣವಿ
36. ತಾನಿಯ
37. ಶೋಭಾ
38. ಯೆಮನ್ ಸೈಯದ್
39. ಸೂರ್ಯ
40. ದರ್ಶನ್
41. ಮನೀಶ್
42. ಅಮರ್
43. ರಾಕೇಶ್
44. ಕಿರಣ್ ಕುಮಾರ್
45. ನವೀನ್ ಎಸ್. ಆರ್
46. ಅವಿನಾಶ್
47. ರಾಕೇಶ್
48. ರಾಘವೇಂದ್ರ
49. ಸರವಣ
50. ಚಂದನ್

# ತೀರ್ಪುಗಾರರ ಮಂಡಳಿ

1. ಮಲ್ಲಿಕಾರ್ಜುನಯ್ಯ
2. ಶೋಭಾ ವೆಂಕಟೇಶ್
3. ಶರತ್ ಪರ್ವತವಾಣಿ
4. ಸವಿತ
5. ಅಭಿಮನ್ಯು
6. ಡಾ. ಕಮಲಾಕ್ಷಿ
7. ಶ್ರೀಧರ್ ಮೂರ್ತಿ
8. ನಿಖಿಲ್
9. ಡಾ. ಹೇಮಾ ಪ್ರಸಾದ್
10. ಸುಚೇತನ್
11. ಗುಂಡಣ್ಣ
12. ಪ್ರೊ. ರಘು ವೆಂಕಟಾಚಲಯ್ಯ
13. ಕಲಾಗಂಗೋತ್ರಿ ಕಿಟ್ಟಿ
14. ಪವನ್
15. ಕಲಾಗಂಗೋತ್ರಿ ಮಂಜು
16. ಚಂದ್ರಕೀರ್ತಿ
17. ಕೆ.ಆರ್. ಗಣೇಶ್
18. ವಿಜಯ್ ಕುಮಾರ್ ಜಿತ್ತೂರಿ
19. ರಾಘವೇಂದ್ರ (ವೀಣ್ಯಾ)
20. ಅಂಜಲಿ ಶೆಟ್ಟಿ
21. ಗುಡಿಹಳ್ಳಿ ನಾಗರಾಜ್

ಕ್ಷಮತೆ ಕೊರತೆಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಇದಲ್ಲ. ಕಾಲೇಜು ತಂಡಗಳು ಇಷ್ಟು ಸಕ್ರಿಯವಾಗಿ ಸೌರಭ 2020 ಅಂತರ ಕಾಲೇಜು ರಂಗಸ್ಪರ್ಧೆಯಲ್ಲಿ ಭಾಗವಹಿಸಿದ್ದಕ್ಕೆ ಮೊದಲು ತಲೆ ಬಾಗಿ, ಈ ಮೇಲಿನ 16 ನಾಟಕಗಳ ಪ್ರದರ್ಶನದ ಅನಿಸಿಕೆಗಳನ್ನು ನಮ್ಮ ಅಭಿಪ್ರಾಯ ಮಾತ್ರವೆಂದು ಪರಿಗಣಿಸಬೇಕು. ನಮ್ಮ ತೀರ್ಪಿನಲ್ಲಿ ತಪ್ಪು ಒಪ್ಪುಗಳಿರಬಹುದು, ಆದರೆ ಅದರ ಪ್ರಾಮಾಣಿಕತೆಯಲ್ಲಿ ಸಂಶಯವಿರದಿದ್ದರೆ ನಾವು ಧನ್ಯ.

ಈ ಕಾಲೇಜುಗಳ ನಿರ್ವಾಹಕರು ವಿದ್ಯಾರ್ಥಿಗಳ ರಂಗ ತರಬೇತಿಯನ್ನು ಸ್ವಲ್ಪ ಪ್ರಮಾಣದಲ್ಲಿ ಕೊಡಿಸಲು ಮುಂದಾದರೂ ಅದೊಂದು ಮುನ್ನಡೆಯಾಗುವುದು. ಮುಂದಿನ ರಂಗಾಸ್ಪರ್ಧೆಗಳ ಸ್ತರ ಇನ್ನಷ್ಟು ಹೆಚ್ಚುವುದು.

ನಮ್ಮನ್ನು ತೀರ್ಪುಗಾರರನ್ನಾಗಿ ಆಯ್ಕೆ ಮಾಡಿದ್ದಕ್ಕೆ ಧನ್ಯತಾಭಾವವಲ್ಲದೆ ಬೇರೇನೂ ಸಲ್ಲ. ಕಡೆಯದಾಗಿ ಹಾಗು ಎಲ್ಲಕ್ಕಿಂತ ಮುಖ್ಯವಾಗಿ, ರಂಗಸೌರಭ ತಂಡಕ್ಕೆ ಹಾಗು ಭಾರತ ಯಾತ್ರಾ ಕೇಂದ್ರಕ್ಕೆ ನಾವುಗಳು ಚಿರಋಣಿ.

ಅವರು ಎತ್ತುಕೊಂಡ ಈ ಕಾಲೇಜು ರಂಗಭೂಮಿಯ ಪುನರುತ್ಥಾನ ಸಾಮಾನ್ಯವಾದುದಲ್ಲ. ಅವರ ಬದ್ಧತೆ, ಕಾರ್ಯನಿರ್ವಹಣೆ, ನೇಪಥ್ಯದಲ್ಲಿ ಕೆಲಸ ಮಾಡಿದವರ ಚಾಕಚಕ್ಯತೆ, ತಂತ್ರಜ್ಞರ ಕೌಶಲ್ಯ, ಲಾಜಿಸ್ಟಿಕ್ಸ್ ಸಂಭಾಳಿಸಿದ ಹುಡುಗ ಹುಡುಗಿಯರು, ಆಡಳಿತ ವರ್ಗದವರು – ಎಲ್ಲರಿಗೂ ನಮ್ಮ ಮೆಚ್ಚುಗೆ, ಧನ್ಯತಾಭಾವ, ನಮನಗಳು.

ಕನ್ನಡ ರಂಗಭೂಮಿ ಒಳ್ಳೆಯ ಕೈಗಳಲ್ಲಿವೆ ಎಂಬುದನ್ನು ನೋಡಿ ಅಮಿತಾನಂದಪೂರಿತರಾಗಿದ್ದೇವೆ.

**ಮಲ್ಲಿಕಾರ್ಜುನಯ್ಯ**
**ಶೋಭಾ ವೆಂಕಟೇಶ್**
**ಶರತ್ ಪರ್ವತವಾಣಿ**




## ಅಗ್ನಿವರ್ಣ

ರಚನೆ : ಹೆಚ್.ಎಸ್. ವೆಂಕಟೇಶಮೂರ್ತಿ
ನಿರ್ದೇಶಕರು : ಸೂರ್ಯ ಸಾಥಿ
ಪ್ರದರ್ಶನ : ನ್ಯಾಷನಲ್ ಕಾಲೇಜು, ಬಸವನಗುಡಿ

ಸೌರಭ 2020 ಅಂತರ ಕಾಲೇಜು ರಂಗ ಸ್ಪರ್ಧೆಯ ಮೊದಲನೇ ನಾಟಕವಿದು.

ಈ ನಾಟಕದಲ್ಲಿ ಗಮನ ಸೆಳೆದದ್ದು ಪ್ರಮುಖವಾಗಿ ಎರಡು ಅಂಶಗಳು – ಒಂದು, ನಾಯಕ ನಟ ಧನ್ವಿನ್ ಜೋಶಿಯ ರಂಗದ ಮೇಲಿನ ಸರಾಗ ಮಾತ್ರವಲ್ಲದೆ ಅಗ್ನಿವರ್ಣನ ಪಾತ್ರದ ಕುಡುಕ ಕಾಮುಕ ವ್ಯಭಿಚಾರಿಯ ಚಿತ್ರಣವನ್ನು ಅತಿಶಯವಾಗಿ ಮಾಡುವ ಬಲೆಗೆ ಬೀಳದೆ ಹೋಗಿದ್ದು. ಎರಡನೆಯದು, 'ನಿರ್ದೇಶಕನ ಟಚ್'. ಇಡೀ ನಾಟಕದಲ್ಲಿ ಈ ಟಚ್ ಕಾಣಸಿಗದೇ ಹೋದರು ಕೆಲವು ಕಡೆ – ಉದಾಹರಣೆಗೆ, ನಾಟಕದಲ್ಲಿನ ನಾಟಕದ ನಟಿಯ ಮಾನಹರಣ ಮಾಡುವ ಬಗೆಯನ್ನು ಬ್ಲಾಕ್ ಮಾಡಿದ ರೀತಿ ಪ್ರಶಂಸನೀಯ. ಎರಡನೇ ಪಿ.ಯೂ.ಸಿ. ಯ ಹುಡುಗನೊಬ್ಬ ಇದನ್ನು ನಿರ್ದೇಶಿಸಿದ್ದು ಎಂದು ತಿಳಿದು ಆಶ್ಚರ್ಯದ ಜೊತೆಗೆ, ಇದು ಕಾಲೇಜ್ ರಂಗಭೂಮಿಗಿರುವ ಉಜ್ವಲ ಭವಿಷ್ಯದ ಬಗ್ಗೆ ಉತ್ಸಾಹ ಮೂಡುವ ವಿಷಯ. ಮೇಳದ ಹಾಡು ಹಾಗು ನೃತ್ಯದ ಭಾಗದಲ್ಲಿ ಇನ್ನಷ್ಟು ಬದ್ಧತೆ ತಂದರೆ ಮುಂದಿನ ಪ್ರದರ್ಶನಗಳ ಮೆರಗು ಹೆಚ್ಚುವುದು.




## ಭೀಮನ ಪ್ರತಿಜ್ಞೆ

ರಚನೆ : ಮಹಾಕವಿ ರನ್ನನ (ಕಾವ್ಯಾಧಾರಿತ)
ನಿರ್ದೇಶಕರು : ಉಮಾಶಂಕರ್ ಹೆಚ್. ಬಿ.
ಪ್ರದರ್ಶನ : ಶೇಷಾದ್ರಿಪುರಂ ವಾಣಿಜ್ಯ ಕಾಲೇಜು, ಮಾಗಡಿ ರಸ್ತೆ.

ಸಿಂಹಾಸನ ವಿಜೃಂಭಿಸುತ್ತಿತ್ತು. ಐತಿಹಾಸಿಕ ಪೋಷಾಕುಗಳು ಬೆಳಗುತ್ತಿದ್ದವು. ಆದರೆ ರಂಗರೂಪ, ವಿನ್ಯಾಸ, ನಿರ್ದೇಶನ, ನಟನೆ, ಇವಕ್ಕೆ ಪೂರಕವಾಗಿ ನಿಲ್ಲಲಿಲ್ಲ. ಪ್ರಯತ್ನದಲ್ಲಿ ಕೊರತೆ ಖಂಡಿತ ಇರಲಿಲ್ಲ. ನಟ ನಟಿಯರು ರಂಗದ ಮೇಲೆ 'ಲೈವ್' ಹಾಡುವುದು ಸುಲಭವಲ್ಲ. ಯತ್ನ ಪ್ರಶಂಸನೀಯ. ಆದರೆ ಪ್ರಯತ್ನದ ಜೊತೆಗೆ, ಯಾವುದು ಈ ಸಮಯಕ್ಕೆ ಈ ತಂಡಕ್ಕೆ ಸಾಧ್ಯ ಯಾವುದನ್ನು ರಂಗದ ಮೇಲೆ ತರುವ ಮುನ್ನ ಇನ್ನೂ ಕಲಿಯಬೇಕು ತಾಲೀಮು ನಡೆಸಬೇಕು ಎನ್ನುವುದರ ಅರಿವು ಅಷ್ಟೇ ಮುಖ್ಯ. ಇವನ್ನು ರೂಪಿಸಿಕೊಂಡರೆ ಮುಂದಿನ ಪ್ರಯತ್ನಗಳು ಫಲಕಾರಿಯಾಗುವ ಸಾಧ್ಯತೆ ಇದೆ.




## ಆಶ್ಚರ್ಯ ಚೂಡಾಮಣಿ

ರಚನೆ : ಶಕ್ತಿಭದ್ರ
ಅನುವಾದ : ಬಿ. ಆರ್. ವೆಂಕಟರಮಣ ಐತಾಳ್
ನಿರ್ದೇಶಕರು : ಅನೂಶಾ ಪೂರ್ಣನ್ ಎಸ್.
ಪ್ರದರ್ಶನ : ಬಿ.ಎಂ.ಎಸ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು.

ಈ ನಾಟಕದಲ್ಲಿ ಕಲರಿಯನ್ನು ಉಪಯೋಗಿಸಿ ಕೆಲ ಪಾತ್ರಗಳು ಎಂಟ್ರಿ ಎಕ್ಸಿಟ್ ಮಾಡಿದ ಬಗೆ ನೂತನವಾಗಿತ್ತು. Stylization ಅನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದ ನಟರ energy ಸೂಕ್ತವಾಗಿತ್ತು. ಬೆಳಕಿನ ವಿನ್ಯಾಸ ಜಾರಿಂಗ್ ಎನಿಸುವಂತಿತ್ತು. ಈ ನಾಟಕದಲ್ಲಿ ವಿಶೇಷತಃ ಪೋಷಕ ನಟಿಯರು ಚೆನ್ನಾಗಿ ಅಭಿನಯಿಸಿದರು. ಲೈವ್ ಹಾಡುಗಾರಿಕೆ ಚೆನ್ನಾಗಿದ್ದರೂ ಸಾಹಿತ್ಯ ಸ್ಪಷ್ಟವಾಗಿರಲಿಲ್ಲ. ಗಮನ ಕೊಡಬೇಕಾದ ವಿಷಯಗಳಿವು. ಸಂಗೀತ ಹಾಗು ವಸ್ತ್ರವಿನ್ಯಾಸ ಶ್ಲಾಘನೀಯ. ಪ್ರಸಾದನದಲ್ಲಿ ಅಸಮತೆ ಎದ್ದು ಕಾಣಿಸುತ್ತಿತ್ತು – ರಾಮ ರಾವಣರ ಹೇರ್ ಸ್ಟೈಲ್ ಇಂದಿನ ಪಡ್ಡೆ ಹುಡುಗರ ಹಾಗಿದ್ದಿದ್ದು ವಿಷಾದನೀಯ. ಹೀಗಿದ್ದರೂ ನಾಟಕದ ಹಲವು ತಂತ್ರಗಳು ಒಟ್ಟುಗೂಡಿದ ರೀತಿ ಪರಿಣಾಮಕಾರಿಯಾಗಿತು.




## ಋಣ

ರಚನೆ : ಮಂಜುನಾಥ್ ದೊರೆಸ್ವಾಮಿ
ನಿರ್ದೇಶಕರು : ಸುಹಾಸ್ ವಿ. ಕುಮಾರ್
ಪ್ರದರ್ಶನ : ಕೆ. ಎಲ್. ಇ. ಕಾಲೇಜು.

ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ನಡೆಯುವ ಒಂದು ಹೋರಾಟದ ಪ್ರಸಂಗ ಈ ನಾಟಕದ ಕಥಾವಸ್ತು. ನಮಗಾಗಿ ಹೋರಾಡಿದವರ ಕಥೆಗಳ ಪುನರುವಾಚ ಎಷ್ಟು ಮುಖ್ಯವೋ ಅದನ್ನು ಪರಿಣಾಮಕಾರಿಯಾಗಿ ಹೇಳುವುದು ಅಷ್ಟೇ ಮುಖ್ಯ. ಅಲ್ಲಿ ಈ ಪ್ರದರ್ಶನ ಹಿಂದೆ ಬಿದ್ದಿದೆ. ರಂಗಪ್ರಜ್ಞೆ ನೇಪಥ್ಯದ ಕೆಲಸಗಳಲ್ಲಿ ಅಚ್ಚುಕಟ್ಟಿರಲಿಲ್ಲ. ರಂಗ ತರಬೇತಿಯ ಅವಶ್ಯಕತೆ ಕಾಣಿಸುತ್ತಿತ್ತು. ಆಯ್ಕೆ ಮಾಡಿದ ವಸ್ತು ಪ್ರಶಂಸಾರ್ಹ. ಯತ್ನ ಪ್ರಶಂಸಾರ್ಹ.




## ಸ್ಮಶಾನ ಕುರುಕ್ಷೇತ್ರ

ರಚನೆ : ಕುವೆಂಪು
ನಿರ್ದೇಶಕರು : ಡಾ. ಹೇಮಲತಾ ಬಿ. ಎಸ್.
ಪ್ರದರ್ಶನ : ಸಿ.ಎಂ.ಎಸ್ ಜೈನ್ ವಿಶ್ವವಿದ್ಯಾಲಯ.

ಅತ್ಯುತ್ತಮ ಪ್ರದರ್ಶನ. ಸೌರಭ 20202ರ ಎಲ್ಲಾ ನಾಟಕಗಳ ಮಧ್ಯೆ ಎದ್ದು ಕಾಣಿಸುವಂಥ ಪ್ರಯೋಗ. ಈ ರಂಗಪ್ರದರ್ಶನದ ವೈಶಿಷ್ಟ್ಯ ಏನೆಂದರೆ, ಎಲ್ಲ ರಂಗವಿಭಾಗಳು ಒಂದೇ ಎಂಟಿಟಿಯಂತೆ ಕಂಡು ಬಂದಿದ್ದು. ಅರ್ಥಾತ್, ನಟನೆ, ವಿನ್ಯಾಸ, ನಿರ್ದೇಶನ, ಬೆಳಕು ವಿನ್ಯಾಸ ಹಾಗು ನಿರ್ವಹಣೆ, ಶಬ್ದ ವಿನ್ಯಾಸ ಹಾಗು ನಿರ್ವಹಣೆ, ವಸ್ತ್ರ ವಿನ್ಯಾಸ, ಎಲ್ಲವೂ ಒಂದೇ ಮಟ್ಟದಲ್ಲಿ, ಉನ್ನತ ಮಟ್ಟದಲ್ಲಿದ್ದದ್ದುದನ್ನು ಕಂಡು ಪ್ರಮೋದವಾಯಿತು. ಈ ಬಾರಿಯ ಪ್ರಶಸ್ತಿ ಪಟ್ಟಿಯಲ್ಲಿ ಹೊಸದಾಗಿ ಸೇರಲ್ಪಟ್ಟ ವಿಭಾಗ – ಭಾಷಾ ಶುದ್ಧತೆ. ಈ ನಾಟಕದ ನಟರ ಭಾಷಾ ಶುದ್ಧತೆಗೆ ಅನ್ಯ ಸ್ಪರ್ಧಿಗಳೇ ಇರಲಿಲ್ಲ. ತಂಡದ ಶ್ರಮ, ಶಿಸ್ತು, ರಂಗಪ್ರಜ್ಞೆ ಉನ್ನತ ಮಟ್ಟದಲ್ಲಿತ್ತು. ನಾಟಕದ ರಸಾನುಭವ ಮಿಕ್ಕೆಲ್ಲ ನಾಟಕಗಳಿಗಿಂತ ಹೆಚ್ಚಿತ್ತು.




## ಮಣ್ಣಿನ ಕಥೆ

ರಚನೆ : ಪೂಮನಿ

ಅನುವಾದ : ವಿನೋದ ಗೋಕಾಕ

ನಿರ್ದೇಶಕರು : ವಿನೋದ ಗೋಕಾಕ

ಪ್ರದರ್ಶನ : ಕ್ರೈಸ್ಟ್ (ಡೀಮ್ಡ್ ಟು ಬಿ) ಯೂನಿವರ್ಸಿಟಿ, ಹೊಸೂರು ರಸ್ತೆ.

ಒಂದು ತಮಿಳು ಭಾಷೆಯ ಕಾದಂಬರಿ ಆಧಾರಿತ ನಾಟಕವಾದ ಮಣ್ಣಿನ ಕಥೆ ಆರಕ್ಕೇರಲಿಲ್ಲ ಮೂರಕ್ಕಿಳಿಯಲಿಲ್ಲ. ವಿನ್ಯಾಸದಲ್ಲಿ ಹೊಸತಿನ ಅಭಾವವಿತ್ತು. ಒಳ್ಳೆಯ ಪ್ರದರ್ಶನವಾಗುವ ಸಂಭಾವ್ಯವಿದ್ದ ಕಥಾವಸ್ತು ಅದೇ ಹಳೆಯ ಜಾಡಿಗೆ ಬಿದ್ದದ್ದು ಕೊಂಚ ನಿರಾಶೆ ಮೂಡಿಸಿತು. ಪ್ರಮುಖ ಪಾತ್ರಗಳನ್ನೂ ನಿರ್ವಹಿಸಿದ ನಟ ನಟಿ ಅಭಿನಯದಲ್ಲಿ ಕೌಶಲ್ಯ ತೋರಿದರೂ ಒಟ್ಟಾರೆ ನಾಟಕದ ಪರಿಣಾಮ ಸಾಧಾರಣ, ರಸಾನುಭವ ಅಷ್ಟಕ್ಕಷ್ಟೇ. ವಿನ್ಯಾಸದಲ್ಲಿ, ನಿರ್ದೇಶನದಲ್ಲಿ ಪ್ರಮುಖ ನಟ ನಟಿಯರ 'ಇಂಟೆಂಟ್' ಪ್ರತಿಬಿಂಬಿಸಿದರೆ, ಮುಂದಿನ ಪ್ರದರ್ಶನಗಳ ಸ್ತರ ಹೆಚ್ಚುವುದರಲ್ಲಿ ಸಂಶಯವಿಲ್ಲ.




## ಹೀಗೂ ಆಗುತ್ತೆ

ರಚನೆ : ವೇಣುಗೋಪಾಲ ಕಾಸರಗೋಡು
ನಿರ್ದೇಶಕರು : ಸುಮುಖ ಎಸ್.
ಪ್ರದರ್ಶನ : ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು.

ಈ ನಾಟಕದ ಕಲಾವಿದರ ತಂತ್ರಜ್ಞರ ನೇಪಥ್ಯ ಕೆಲಸಗಾರರ ಮೇಲೆ ನಮ್ಮ ಸಹಾನುಭೂತಿಯಿದೆ. ಶಸ್ತ್ರಾಭ್ಯಾಸ ನಡೆಸದೆಯೇ ಯುದ್ಧಭೂಮಿಗೆ ಕಳುಹಿಸಲ್ಪಟ್ಟ ಯೋಧರ ಹಾಗೆ, ಯಾವುದೇ ತರಬೇತಿ, ರಂಗಪ್ರಜ್ಞೆ, ಅನುಭ ವ ಇಲ್ಲದುದ್ದದ್ದು ಎದ್ದು ಕಾಣಿಸುತ್ತಿತ್ತು. ದೃಶ್ಯ ಬದಲಾವಣೆ ಇಲ್ಲದೆ ಒಂದು ವಸ್ತ್ರಾ ಬದಲಾವಣೆಗೆ 3–4 ನಿಮಿಷ ಬ್ಲಾಕ್ಔಟ್‌ಗಳು ಸಂಭವಿಸಿದ್ದು ಶೋಚನೀಯ. ಟೀಕೆಯಾಗಿ ಅಲ್ಲ, ಇಡೀ ತಂಡದ ತಯಾರಿ ತರಬೇತಿಯ ಅವಶ್ಯಕತೆಯ ಕಡೆಗೆ ಗಮನ ಸೆಳೆಯುವ ಪ್ರಯತ್ನ ಮಾತ್ರವಿದು. ಸೌರಭ 2021ರಲ್ಲಿ ಇದೆ ತಂಡ ಇದೆಲ್ಲವನ್ನೂ ಮೈಗೂಡಿಸಿಕೊಂಡು ಒಂದು ಒಳ್ಳೆಯ ಪ್ರದರ್ಶನ ಮಾಡುವರೆಂಬ ನಮ್ಮ ಆಸೆಯ ನಿಟ್ಟಿನಲ್ಲಿ ಈ ಮೇಲಿನ ಮಾತುಗಳನ್ನು ಅವಲೋಕಿಸತಕ್ಕದ್ದು.




## ರಾವಿ ನದಿಯ ದಂಡೆಯಲ್ಲಿ

ರಚನೆ : ಡಾ. ತಿಪ್ಪೇಸ್ವಾಮಿ
ನಿರ್ದೇಶಕರು : ಕಾಳಿ ಪ್ರಸಾದ್
ಪ್ರದರ್ಶನ : ಪಿ.ಇ.ಎಸ್ ಕಾಲೇಜು, ಹನುಮಂತನಗರ.

ಅಚ್ಚುಕಟ್ಟಿನಲ್ಲಿ ನಾಟಕದ ಈ ಪ್ರದರ್ಶನ ಮೇಲ್ಮಟ್ಟದಲ್ಲಿದ್ದದ್ದು ನಿಜ. ರಂಗಸಜ್ಜಿಕೆ ಚೆನ್ನಾಗಿ ಮೂಡಿ ಬಂದಿತ್ತು. functional ಆಗಿತ್ತು. ನಟರ 'ಬಿಸಿನೆಸ್' ಮೇಲೆ ಗಮನ ಕೊಟ್ಟಿದ್ದು ನಿರ್ದೇಶಕರ ಕ್ರಾಫ್ಟ್ ಅನ್ನು ತೋರಿಸುತ್ತದೆ. ನಿರ್ದೇಶಕರ 'ಟಚ್' ನಾಟಕದಲ್ಲಿ ಅಷ್ಟಾಗಿ ಕಾಣಿಸಲಿಲ್ಲ. 1947–48 ರಲ್ಲಿ ನಡೆಯುವ ಕಥೆಯ ಟೀ ಅಂಗಡಿ ದರಗಳು ಇಂದಿನದಂತೆ ಇದ್ದದ್ದು ಕೊಂಚ careless ಎನಿಸಿತು. ಹಾಗೆಯೇ ಮುಸಲ್ಮಾನ ಸಮುದಾಯದ ಪಾತ್ರಧಾರಿಗಳಿಗೆ ಕಿವಿಗೆ ಓಲೆ ಹಾಕಿಸಿದ್ದೂ ಕೂಡ. ನಟನೆಯಲ್ಲಿ ಅಚ್ಚುಕಟ್ಟಿತ್ತು, ಆದರೆ ರಸಾನುಭವದ ಅಂಶ ಕಡಿಮೆಯಿತ್ತು.




## ಸಂಕ್ರಾಂತಿ

ರಚನೆ : ಪಿ. ಲಂಕೇಶ್
ನಿರ್ದೇಶಕರು : ಹನುಮಂತರಾಯಪ್ಪ
ಪ್ರದರ್ಶನ : ಸಂತ ಜೋಸೆಫ್ ವಿಜ್ಞಾನ ಕಾಲೇಜು.

ಪ್ರದರ್ಶನದ ಒಟ್ಟಾರೆ ಎನರ್ಜಿ ಕಡಿಮೆಯಿದ್ದಿತು. ವಸ್ತ್ರ ವಿನ್ಯಾಸದ ಕೆಲವು ಅಂಶಗಳಲ್ಲಿ carelesness ಕಾಣಿಸಿತು. ಬಸವಣ್ಣನವರ ಕಾಲದ ಹುಡುಗ ಇಂದಿನ ಕಾಲದ ಶರ್ಟ್ ಹಾಕಿಕೊಂಡದ್ದು, ಪ್ಲಾಸ್ಟಿಕ್ ಬಿಂದಿಗೆ ಪರಿಕರವಾಗಿ ಉಪಯೋಗಿಸಿದ್ದು ಕ್ಷಮಿಸಲಾಗದಂತಹ ತಪ್ಪುಗಳು. ಇಂತಹ ತಪ್ಪುಗಳನ್ನು ರಂಗದ ಹೊರಗಿಡುವುದು ಸುಲಭ, ಹಾಗಾಗಿ ಇದು ಕಟು ಟೀಕೆಗೆ ಅರ್ಹ. ಸಂಗೀತ ನಟನೆ ರಂಗಸಜ್ಜಿಕೆ ಎಲ್ಲದರ ಸ್ತರವೂ ಹೆಚ್ಚಬಹುದು. ರಂಗತರಬೇತಿ ಆವಶ್ಯಕ. ಮುಂದಿನ ಪ್ರದರ್ಶನಗಳಲ್ಲಿ ಇವೆಲ್ಲವನ್ನೂ ಸರಿಪಡಿಸಿಕೊಂಡರೆ ತಂಡಕ್ಕೆ ಶುಭವಾಗುವುದು ನಿಶ್ಚಿತ.




## ಶೂದ್ರ ತಪಸ್ವಿ

ರಚನೆ : ಕುವೆಂಪು
ರೂಪಾಂತರ : ಜಿ.ಎಸ್.ಶಿವರುದ್ರಪ್ಪ
ನಿರ್ದೇಶಕರು : ಡಾ. ಕೆಂಗಲ್ ಮೂರ್ತಿ ಕೆ. ಜಿ.
ಪ್ರದರ್ಶನ : ಸಿ. ಎಂ. ಆರ್ ಯೂನಿವರ್ಸಿಟಿ.

ವಸ್ತ್ರ ವಿನ್ಯಾಸ, ರಾಮ ಪಾತ್ರಧಾರಿಯ ಚರ್ಯೆ, ಅಚ್ಚುಕಟ್ಟಾದ ಎಂಟ್ರಿ ಎಕ್ಸಿಟ್ಗಳು ಈ ನಾಟಕದ ಪ್ರಶಂಸನೀಯ ಅಂಶಗಳು. ಮೇಳದ ಸಂಗೀತ ಹಾಗೂ ಗಾಯನದ ಸ್ತರ ಹೆಚ್ಚಿರಬಹುದಿತ್ತು. ಬೆಳಕಿನ ನಿರ್ವಹಣೆಯಲ್ಲಿ ತೊಡರುಗಳಿದ್ದವು. ವಸ್ತ್ರ ವಿನ್ಯಾಸ ಚಂದವಿತ್ತು. ಆದ್ರೆ ಕನಿಷ್ಠ ನಿಗದಿತ ಪ್ರದರ್ಶನದ ಸಮಯ 45 ನಿಮಿಷಗಳಿದ್ದರೂ, ಕೇವಲ 32 ನಿಮಿಷಗಳಿಗೆ ನಾಟಕವನ್ನು ಮುಗಿಸಿದ್ದನ್ನು ನಿಯಮಗಳ ಉಲ್ಲಂಘನೆಯಷ್ಟೇ ಅಲ್ಲ, ಅಸಡ್ಡೆ ಎಂದೂ ಭಾವಿಸಬೇಕಾಗುತ್ತದೆ.




## ಪ್ರಮೀಳಾರ್ಜುನೀಯಂ

ರಚನೆ : ಎಮ್. ಎಲ್. ಶ್ರೀಕಂಠೇಶಗೌಡ
ನಿರ್ದೇಶಕರು : ನವೀನ್ ಸಾಣೇಹಳ್ಳಿ
ಪ್ರದರ್ಶನ : ನ್ಯಾಷನಲ್ ಕಾಲೇಜು, ಜಯನಗರ.

ಸ್ಮಶಾನ ಕುರುಕ್ಷೇತ್ರ ನಾಟಕಕ್ಕೆ ಹತ್ತಿರದ ಪ್ರತಿಸ್ಪರ್ಧಿಯಾಗಿ ಈ ನಾಟಕದ ಪ್ರದರ್ಶನ ಮೂಡಿ ಬಂದಿತು. ಪೋಷಕ ಪಾತ್ರಧಾರಿಗಳು ಒಬ್ಬರಿಗೊಬ್ಬರು ಪೈಪೋಟಿಯಲ್ಲಿ (ಸಕಾರಾತ್ಮಕ) ಅಭಿನಯಿಸಿದ್ದು ನಾಟಕದ ಒಟ್ಟಾರೆ ಎನರ್ಜಿ ಗೆ ಬಲ ನೀಡಿತು. ಉನ್ನತ ಸ್ತರದ ರಂಗಸಜ್ಜಿಕೆ ಹಾಗೂ ನೇಪಥ್ಯದ ಕೆಲಸ, ಉತ್ತಮ ರಂಗಪರಿಕರ, ಬೆಳಕಿನ ಣಡಿಚಿಥಿಣುಂಟಿ ಗಳು, ನಟರ ಎಂಟ್ರಿ ಎಕ್ಸಿಟ್ ಗಳು, ಕಥೆಯ ಹರಿವು ಎಲ್ಲವೂ ಸರಾಗವಾಗಿದ್ದವು. ನಿರ್ದೇಶಕರ ಕ್ರಾಫ್ಟ್ ಹಾಗೂ ಬದ್ಧತೆ ಕಾಣಿಸುತ್ತಿತ್ತು. ಕೆಲವು ನಟರ ಭಾಷಾ ಶುದ್ಧತೆಯಲ್ಲಿ ಕೊರತೆ ಕಂಡಿತು. ಕೆಲವು ಕಡೆ ಶಬ್ದ ವಿನ್ಯಾಸ ಅನಾವಶ್ಯಕ ಎನಿಸಿತು. ಕೆಲವು ನಟರ ನಟನೆಯ ಸ್ತರ ಉಳಿದವರಿಗಿಂತ ಕೊಂಚ ಕಡಿಮೆ ಇದದ್ದು ಕಂಡು ಬಂದಿತು. ಒಂದು ರಂಗಪರಿಕರಾದ ಮೇಲೆ ಇಂಡಿಯನ್ ಜಾಹಿರಾತು ಕಂಡದ್ದು ಆಭಾಸವೆನಿಸಿತು. ರಂಗದ ಮೇಲೆ ಒಂದು ಅನಿರೀಕ್ಷಿತ ಘಟನೆ ನಡೆದಾಗ ಅದನ್ನು ನಟರು ಸಂಭಾಳಿಸಿದ ರೀತಿ ಮೆಚ್ಚುವಂಥದ್ದು. ಹಾಸ್ಯದ ರಸಾನುಭವ ಇಡೀ ನಾಟಕ ಹರಿದದ್ದು ಶ್ಲಾಘನೀಯ.




## ಆಷಾಡದ ಒಂದು ದಿನ

ರಚನೆ : ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ
ನಿರ್ದೇಶಕರು : ರೇಣುಕಾ ಬಾಲಿ
ಪ್ರದರ್ಶನ : ದಯಾನಂದ್ ಸಾಗರ್ ಸಂಸ್ಥೆ.

ರಂಗಸಜ್ಜಿಕೆ ಉತ್ತಮವಾಗಿತ್ತು. ರಂಗಪರಿಕರದಲ್ಲಿ detailing ಕಾಣಿಸಿತು. ನಟರ 'ಬಿಸಿನೆಸ್' ಮೇಲೆ ಕೂಡ ಗಮನ ಕೊಟ್ಟದ್ದು ಮನಸೆಳೆಯಿತು. ನಾಟಕದ ಓಟ ವೇಗಗಳಲ್ಲಿ ಅನವಶ್ಯಕ ನಿಧಾನವಿದ್ದದ್ದು ಕಂಡಿತು. ಮುಕ್ಕಾಲು ವಾಸಿ ನಟರಲ್ಲಿ ಎನರ್ಜಿಯ ಕೊರತೆ ಇದ್ದಿತು, ನಟನಾ ಲವಲವಿಕೆಯ ಅಭಾವವಿತ್ತು. ಸಂಭಾಷಣೆಯ ಮೇಲೆ ಜೋರಾದ ಸಂಗೀತ ರಸಾಭಾಸ ಮಾಡಿತು. ಅನವಶ್ಯಕ ಬೆಳಕು ನಿರ್ವಹಣೆ ಕೆಲವು ಸಂದರ್ಭಗಳಲ್ಲಿ. ಹೀಗಿದ್ದರೂ ಪ್ರದರ್ಶನದ ತಯಾರಿ ಹಾಗೂ ನಿರ್ವಹಣೆಯನ್ನು ಸೀರಿಯಸ್ ಆಗಿ ತೆಗೆದುಕೊಂಡಿದ್ದಾರೆ ಕುರುಹುಗಳು ಸಾಕಷ್ಟಿದ್ದವು. ತಾಯಿಯ ಪಾತ್ರ ಮಾಡಿದ ನಟಿಯ ಬದ್ಧತೆ ಎದ್ದು ಕಂಡಿತು. ಕೊರತೆಗಳ ಪಟ್ಟಿ ಮಾಡಿರುವುದು ಅವನ್ನು ರಂಗಶಕ್ತಿಯನ್ನಾಗಿ ಪರಿವರ್ತಿಸುವ ಸಲುವಾಗಿ. ಅಳವಡಿಸಿಕೊಂಡಲ್ಲಿ ಈ ತಂಡದ ಸಶಕ್ತವಾಗುವ ಸಂಭಾವ್ಯವಿದೆ.




## ಅಂಗುಲಿಮಾಲ

ರಚನೆ : ಡಾ. ಪ್ರಭುಶಂಕರ
ನಿರ್ದೇಶಕರು : ಜಗದೀಶ್ ನಿನಾಸಂ
ಪ್ರದರ್ಶನ : ಎಂ.ಎಸ್ ಕಾಲೇಜು.

ನಟರ ಸಂಭಾಷಣೆ ಅವಶ್ಯಕ್ಕಿಂತ ಹೆಚ್ಚಿನ ಪಿಚ್ ಅಲ್ಲಿ ಇದ್ದದ್ದು ಕಂಡು ಬಂದಿತು ಹಾಗು ಸಂಭಾಷಣೆಯಲ್ಲಿ variation ಇರಲಿಲ್ಲ. ಸಂಗೀತ ಕೊಂಚ ಕೈ ಕೊಟ್ಟಿತು. ಮೇಳದ ಹಾಡುಗಾರಿಕೆ ಅಷ್ಟಾಗಿ ಪರಿಣಾಮಕಾರಿಯಾಗಿ ಇರಲಿಲ್ಲ. repititive ಎನಿಸುವ ಬ್ಲಾಕಿಂಗ್. ರಂಗ ತರಬೇತಿಯ ಅವಶ್ಯಕತೆ ಮತ್ತೆ ಕಂಡುಬಂದಿತು. ಯತ್ನದಲ್ಲಿ ಕೊರತೆ ಖಂಡಿತ ಕಂಡುಬರಲಿಲ್ಲ. ಒಟ್ಟಾರೆ ನಾಟಕದ ಅನುಭವ ರಸಮಯವಾಗಿರಲಿಲ್ಲ.




## ನಾನು ಚಂದ್ರಗುಪ್ತನೆಂಬ ಮೌರ್ಯ

ರಚನೆ : ಮಹಂತೇಶ ನವಲ್ಕರ್
ನಿರ್ದೇಶಕರು : ಮಾಲತೇಶ್ ಬಡಿಗೇರ್
ಪ್ರದರ್ಶನ : ಎಸ್.ಎಸ್.ಎಂ.ಆರ್.ವಿ ಕಾಲೇಜು.

ಈ ನಾಟಕದಲ್ಲಿ ಎದ್ದು ಕಂಡದ್ದು ಚಾಣಕ್ಯ ಪಾತ್ರಧಾರಿಯ ನಟನೆ, ಧ್ವನಿ ಏರಿಳಿತ, body language ಹಾಗು ಪಾತ್ರಕ್ಕೆ ತಕ್ಕನಾದಗತ್ತು. ಅತ್ಯುತ್ತಮವಾದ ರಂಗಪರಿಕರ ಈ ನಾಟಕದ ಇನ್ನೊಂದು ಪ್ಲಸ್. ಭಾವನೆಗಳ ಹಿಡಿತ ಅಷ್ಟಾಗಿ ಕಂಡುಬರಲಿಲ್ಲ. ಶೈಲಿ stylized ಆದರೂ, ಭಾವನೆಗಳು ನೈಜವಾಗಿ ಹೊರಹೊಮ್ಮುವುದು ಅವಶ್ಯಕ. ಅದು ಅಷ್ಟಾಗಿ ಹೊರಬರಲಿಲ್ಲ. ಡ್ರಾಮಾಟಿಕ್ ಮೊಮೆಂಟ್‌ಗಳು ನಿಲ್ಲಲಿಲ್ಲ, ಓಡುತ್ತಿದ್ದವು, ಹಾಗಾಗಿ ಪ್ರೇಕ್ಷಕ ಪಾತ್ರಗಳ ಜೊತೆ ಪ್ರಯಾಣ ಮಾಡುವುದು ದುಸ್ತರವಾಗಿತ್ತು. ಸಂಗೀತದ ವಿನ್ಯಾಸ ಕೆಲವು ಕಡೆ jarring ಎನಿಸಿದ್ದು ನಿಜ. ಚಾಣಕ್ಯನ ಕಾಲದ ಪಾತ್ರವೊಂದು ಕನ್ನಡಕ ಹಾಕಿಕೊಂಡು ರಂಗದ ಮೇಲೆ ಬಂದದ್ದು ವಿಷಾದನೀಯ. ನಾಟಕದ ಕಥಾವಸ್ತು ಏನೇ ಇರಲಿ, ಅದು ಒಂದು ಪ್ರಪಂಚದ ಸೃಷ್ಟಿಯನ್ನ ಪ್ರಾಮಾಣಿಕವಾಗಿ ಮಾಡಬೇಕು, ಅದು ಈ ನಾಟಕದಲ್ಲಿ ಇರಲಿಲ್ಲ.




## ಮಾರುತಿ ವಿಜಯ

ರಂಗರೂಪ : ಮಹೇಶ್ ಪಲ್ಲಕ್ಕಿ
ನಿರ್ದೇಶಕರು : ಮಹೇಶ್ ಪಲ್ಲಕ್ಕಿ
ಪ್ರದರ್ಶನ : ಎಂ.ಇ.ಎಸ್ ಕಾಲೇಜು.

ಇಡಿಯ ಸ್ಪರ್ಧೆಯಲ್ಲಿ ಅತ್ಯೋನ್ನತ ಮೇಳ ಇದ್ದದ್ದು ಈ ನಾಟಕದಲ್ಲಿ. ಹರಿಕಥೆಯ ಶೈಲಿ ಹಾಗು ಹರಿಕಥಾದಾಸರನ್ನು ಕಥೆಯೊಳಗೆ ಅಳವಡಿಸಿಕೊಂಡದ್ದು ಕ್ರಿಯಾತ್ಮಕವಾಗಿತ್ತು. ನಿರ್ದೇಶಕರ ಟಚ್ ಇಲ್ಲಿ ಕೆಲವು ಅಂಶಗಳಲ್ಲಿ ಕಂಡುಬಂದಿತು. ರಂಗವಿನ್ಯಾಸ ರಂಗಪರಿಕರದಲ್ಲಿ ಸೃಜನಶೀಲತೆ ಇತ್ತು. ಕೆಲವು ನಟ ನಟಿಯರ ಅಭಿನಯ ಅಸಮವಾಗಿತ್ತು. ಪ್ರಸಾದನ ಕೆಲ ಪಾತ್ರಗಳದ್ದು ಆಪ್ಯಾಯಮಾನವಾಗಿರಲಿಲ್ಲ. ಸೀತೆಯ ಉಡುಪಿನ ಮೇಲೆ ಪ್ರಿಂಟ್ ಇದ್ದದ್ದು ಆಭಾಸಕಾರಿ. ಒಟ್ಟಾರೆ ಈ ನಾಟಕದ ಪ್ರದರ್ಶನದಲ್ಲಿ ಹಲವು ಬಾರಿ ರಸೋಲ್ಲಾಸ ಆಗಿದ್ದು ನಿಜ.




## ಬೊಂಬಾಟ್ ಬೀಚಿ

ರಚನೆ : ಬೇಲೂರು ರಾಮಮೂರ್ತಿ
ನಿರ್ದೇಶಕರು : ವಿನೋದ್ ರಂಗ
ಪ್ರದರ್ಶನ : ವಿಜಯ ಪಿ.ಆರ್.ಎಂ ಕಾಲೇಜು, ಟಿ. ನರಸೀಪುರ.

ಬೆಂಗಳೂರು ತಂಡಗಳ ಹೊರತಾಗಿ ಸ್ಪರ್ಧಿಸಿದ, ಟಿ.ನರಸೀಪುರದಿಂದ ಬಂದ ಈ ಕಾಲೇಜು ತಂಡಕ್ಕೆ, ಅವರ ರಂಗಾಸಕ್ತಿಗೆ ನಮನಗಳು. ಬೀಚಿಯವರ ಜೀವನ ಚರಿತ್ರೆಯ ಕಥಾವಸ್ತುವುಳ್ಳ ಈ ನಾಟಕದ ಆಯ್ಕೆ ಪ್ರಶಂಸನೀಯ. ನಟ ನಟಿಯರ ಬದ್ಧತೆಯಲ್ಲಿ ಎರಡು ಮಾತಿಲ್ಲ. ಆದರೆ ಇಷ್ಟೊಂದು ರಂಗಾಸಕ್ತಿ ಉಳ್ಳ ಹುಡ್ಗ ಹುಡುಗಿಯರಿಗೆ ಒಂದು ಸಣ್ಣ ಪ್ರಮಾಣದಲ್ಲಾದರೂ ತರಬೇತಿ ದೊರೆತರೆ ಈ ಕಾಲೇಜಿನ ತಂಡವು ಯಾರಿಗೂ ಕಮ್ಮಿ ಎನಿಸಿಕೊಳ್ಳುವುದಿಲ್ಲ.

# ಪ್ರಶಸ್ತಿ – ಪಾರಿತೋಷಕಗಳು

ಜ್ಞಾನಭಾರತಿ ಸರ್ವೋತ್ತಮ ಪಾರಿತೋಷಕ
ಉಮೇಶ್ ರುದ್ರ ಸರ್ವೋತ್ತಮ ದ್ವಿತೀಯ ಪಾರಿತೋಷಕ
ಪದ್ಮಭೂಷಣ ಡಾ॥ ಎಚ್. ನರಸಿಂಹಯ್ಯ ತೃತೀಯ ಸರ್ವೋತ್ತಮ ಪಾರಿತೋಷಕ
ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಅತ್ಯುತ್ತಮ ನಾಟಕ ಪಾರಿತೋಷಕ
ಪ್ರಯೋಗರಂಗ ದ್ವಿತೀಯ ನಾಟಕ ಪಾರಿತೋಷಕ
ಶಂಕರ್‌ನಾಗ್ ತೃತೀಯ ನಾಟಕ ಪಾರಿತೋಷಕ
ಪದ್ಮಭೂಷಣ ವೆಂಕಟಲಕ್ಷ್ಮಮ್ಮ ನೃತ್ಯ ಪಾರಿತೋಷಕ
ಜಿ.ವಿ. ಅತ್ರಿ ಸಂಗೀತ ಸ್ಪರ್ಧೆಗಳ ಪಾರಿತೋಷಕ
ಚನ್ನವೀರಮ್ಮ ಗಂಗಣ್ಣ ಏಕಪಾತ್ರಾಭಿನಯ ಪಾರಿತೋಷಕ
ಕನ್ನಳ್ಳಿ ಮಹಾದೇವಯ್ಯ ಮೂಕಾಭಿನಯ ಪಾರಿತೋಷಕ
ಬಿ.ಕೆ. ಲೋಕಪ್ಪಗೌಡ ಚರ್ಚಾಸ್ಪರ್ಧೆ ಪಾರಿತೋಷಕ
ಪ್ರೋ. ಶ್ರೀ ಕಿ. ರಂ. ನಾಗರಾಜ್ ಪ್ರಬಂಧ ಪಾರಿತೋಷಕ
ಕನ್ನಳ್ಳಿ ರುದ್ರಮ್ಮ ವಿರೂಪಾಕ್ಷಯ್ಯ ಹೊರ ಜಿಲ್ಲಾ ನಾಟಕ ಪಾರಿತೋಷಕ
ಸ್ನೇಹಸಮೂಹ ರಂಗಶಿಸ್ತು ಪಾರಿತೋಷಕ
ಅತ್ಯುತ್ತಮ ನಟ ಡಾ. ರಾಜ್‌ಕುಮಾರ್ ಪ್ರಶಸ್ತಿ
ಅತ್ಯುತ್ತಮ ನಟಿ ಉಮಾಶ್ರೀ ಪ್ರಶಸ್ತಿ
ಅತ್ಯುತ್ತಮ ಪೋಷಕ ನಟ ಅಚ್ಯುತ್ ಕುಮಾರ್ ಪ್ರಶಸ್ತಿ
ಅತ್ಯುತ್ತಮ ಪೋಷಕ ನಟಿ ಗಿರಿಜಾ ಲೋಕೇಶ್ ಪ್ರಶಸ್ತಿ
ಮುಖ್ಯಮಂತ್ರಿ ಚಂದ್ರು ಉತ್ತಮ ನಟನಾ ಪ್ರಶಸ್ತಿ
ಅತ್ಯುತ್ತಮ ಪ್ರಚಾರ ಕಲೆ ರಂಗಸೌರಭ ಪ್ರಶಸ್ತಿ
ಅತ್ಯುತ್ತಮ ಸಂಗೀತ ಬಿ.ವಿ. ಕಾರಂತ ಪ್ರಶಸ್ತಿ
ಅತ್ಯುತ್ತಮ ರಂಗಸಜ್ಜಿಕೆ ಶಶಿಧರ ಅಡಪ ಪ್ರಶಸ್ತಿ
ಅತ್ಯುತ್ತಮ ಬೆಳಕು ವಿ. ರಾಮಮೂರ್ತಿ ಪ್ರಶಸ್ತಿ
ಅತ್ಯುತ್ತಮ ರಂಗಪರಿಕರ ಕೃಷ್ಣಮೂರ್ತಿ ಕವತ್ತಾರ್ ಪ್ರಶಸ್ತಿ
ಅತ್ಯುತ್ತಮ ಪ್ರಸಾದನ ಗ್ರೀನ್ ರೂಮ್ ನಾಣಿ ಪ್ರಶಸ್ತಿ
ಅತ್ಯುತ್ತಮ ವಸ್ತ್ರ ವಿನ್ಯಾಸ ಪ್ರಮೋದ್ ಶಿಗ್ಗಾಂವ್ ಪ್ರಶಸ್ತಿ
ಅತ್ಯುತ್ತಮ ಪೋಸ್ಟರ್ ಆರ್.ಎಮ್. ಹಡಪದ್ ಪ್ರಶಸ್ತಿ
ಸಂಚಯ ಜಿ. ಎಸ್. ರಾಮರಾವ್ ಕನ್ನಡ ಭಾಷಾ ಶುದ್ಧತೆ ಮತ್ತು ಉಚ್ಚಾರಣೆ ಪ್ರಶಸ್ತಿ
ಅತ್ಯುತ್ತಮ ರಂಗ ವಿನ್ಯಾಸ ಮೊಹಮ್ಮದ್ ಮುಸ್ತಫಾ ಪ್ರಶಸ್ತಿ
ಅತ್ಯುತ್ತಮ ನಿರ್ದೇಶನ ಪ್ರಸನ್ನ ಹೆಗ್ಗೋಡು ಪ್ರಶಸ್ತಿ
ಅತ್ಯುತ್ತಮ ವಿಮರ್ಶೆ ಪಿ. ಲಂಕೇಶ್ ಪ್ರಶಸ್ತಿ
ಅತ್ಯುತ್ತಮ ಚಿತ್ರಕಲೆ ಎಸ್.ಜಿ. ವಾಸುದೇವ ಪ್ರಶಸ್ತಿ

| ಸ್ಪರ್ಧೆ | ಪ್ರಥಮ ಬಹುಮಾನ | ದ್ವಿತೀಯ ಬಹಮಾನ | ತೃತೀಯ ಬಹುಮಾನ |
|---|---|---|---|
| ರಂಗ ರಸಪ್ರಶ್ನಾವಳಿ | ಎಂ.ಇ.ಎಸ್ ಕಾಲೇಜ್<br>ವೈಷ್ಣವಿ ಕೆ.<br>ಮಹಾಲಕ್ಷ್ಮಿ ಪಿ.ಎಲ್. | ಕೆ.ಎಲ್.ಇ ಕಾಲೇಜ್<br>ವೇದಾಂತ್ ಕೆ.ಎಸ್.<br>ಸಿರಿ ಹರೀಶ್ | ನ್ಯಾಷನಲ್ ಕಾಲೇಜ್ ಬಸವನಗುಡಿ<br>ಧನ್ವಿನ್ ಡಿ. ಜೋಶಿ<br>ವಿಶ್ವಕುಮಾರ್. ಸಿ |
| ಚಿತ್ರಕಲೆ | ವಿಜಯ ಕಾಲೇಜ್ ಜಯನಗರ<br>ಲಿಖಿತ .ವೈ | ಕ್ರೈಸ್ಟ್ ಕಾಲೇಜ್<br>ಪವನ್ ಎಂ.ಕೆ | ಎಂ.ಇ.ಎಸ್. ಕಾಲೇಜ್<br>ರಮಿತ ಸಿ.ಎಂ.<br>ವಿಜಯ ಕಾಲೇಜ್ ಜಯನಗರ<br>ಹರಿಕಿರಣ್. ಎಲ್ |
| ಚರ್ಚಾ ಸ್ಪರ್ಧೆ | ಕ್ರೈಸ್ಟ್ ಕಾಲೇಜ್<br>ಸ್ಫೂರ್ತಿ | ಕೆ.ಎಲ್.ಇ. ಕಾಲೇಜ್<br>ಕಾರ್ತಿಕ್ ಹೆಚ್. ಎಂ | ಎಂ.ಇ.ಎಸ್ ಕಾಲೇಜ್<br>ವಿಶ್ವನಾಥ್ ಶರ್ಮ |
| ಪ್ರಬಂಧ ಸ್ಪರ್ಧೆ | ನ್ಯಾಷನಲ್ ಕಾಲೇಜ್<br>ಬಸವನಗುಡಿ<br>ನೇತ್ರಾವತಿ | ಎಂ.ಇ.ಎಸ್. ಕಾಲೇಜ್<br>ವೈಷ್ಣವಿ | ಪಿ.ಇ.ಎಸ್. ಕಾಲೇಜ್<br>ರೇಖಾ |
| ನಾಟಕ ವಿಮರ್ಷೆ | ಕೆ.ಎಲ್.ಇ ಕಾಲೇಜ್<br>ಮೇಘನ ಜಿ. ಹೇರಳೆ | ಎಂ.ಎಸ್ ಕಾಲೇಜ್<br>ಜ್ಯೋತಿ ಕೆ.ಎಸ್. | ಎಸ್.ಎಸ್.ಎಂ. ಆರ್.ವಿ ಕಾಲೇಜ್<br>ಸಂಜಯ್.ಆರ್ |
| ಸುಗಮ ಸಂಗೀತ ಸ್ಪರ್ಧೆ | ನ್ಯಾಷನಲ್ ಕಾಲೇಜ್<br>ಜಯನಗರ<br>ಚಂದನ ಮುರಳೀಧರ | ಎಂ.ಇ.ಎಸ್. ಕಾಲೇಜ್<br>ತನ್ಮಯ ಕೆ.ಆರ್ | ಶ್ರೀ ಬಾಲಾಜಿ ಕಾಲೇಜ್<br>ಸಂಜಯ್ ಎಸ್<br>ಕ್ರೈಸ್ಟ್ ಕಾಲೇಜ್<br>ಶ್ವೇತಾ |
| ಜನಪದ ವೃಂದಗಾಯನ | ನ್ಯಾಷನಲ್ ಕಾಲೇಜ್<br>ಜಯನಗರ | ಕೆ.ಎಲ್.ಇ ಕಾಲೇಜ್ | ನ್ಯಾಷನಲ್ ಕಾಲೇಜ್<br>ಬಸವನಗುಡಿ |
| ಶಾಸ್ತ್ರೀಯ ನೃತ್ಯ ಸ್ಪರ್ಧೆ | ನ್ಯಾಷನಲ್ ಕಾಲೇಜ್<br>ಬಸವನಗುಡಿ<br>ಮೇಘನ ಭಾರದ್ವಾಜ್ | ಕ್ರೈಸ್ಟ್ ಕಾಲೇಜ್<br>ಪ್ರೇಕ್ಷ ಎಂ.ವಿ. | ನ್ಯಾಷನಲ್ ಕಾಲೇಜ್<br>ಬಸವನಗುಡಿ<br>ಸ್ಫೂರ್ತಿ ಜೋಶಿ |
| ಏಕಪಾತ್ರಾಭಿನಯ ಸ್ಪರ್ಧೆ | ಎಸ್. ಎಸ್.ಎಂ. ಆರ್.ವಿ.<br>ಕಾಲೇಜ್<br>ಸಂಜಯ | ಪಿ.ಇ.ಎಸ್ ಕಾಲೇಜ್<br>ಪದ್ಮಿನಿ ಬಿ.ಎಸ್. | ಎಂ.ಇ.ಎಸ್. ಕಾಲೇಜ್<br>ತುಳಸಿ ಜೆ.ಪಿ. |
| ಮೂಕಾಭಿನಯ | ನ್ಯಾಷನಲ್ ಕಾಲೇಜ್<br>ಬಸವನಗುಡಿ | ಪಿ.ಇ.ಎಸ್. ಕಾಲೇಜ್ | ಎಂ.ಇ.ಎಸ್ ಕಾಲೇಜ್ |
| ಜನಪದ ನೃತ್ಯ | ವಿಜಯ ಕಾಲೇಜ್<br>ಜಯನಗರ | ಎಂ.ಎಸ್. ಕಾಲೇಜ್ | ನ್ಯಾಷನಲ್ ಕಾಲೇಜ್<br>ಜಯನಗರ |

| ಪ್ರಶಸ್ತಿ | ಪ್ರಥಮ | ದ್ವಿತೀಯ | ತೃತೀಯ |
|---|---|---|---|
| ಅತ್ಯುತ್ತಮ ನಟ<br>**ಡಾ. ರಾಜಕುಮಾರ್**<br>ಪ್ರಶಸ್ತಿ | ಸಂಜಯ್ ಐ.ಎಸ್.<br>ಚಾಣಕ್ಯ<br>**ನಾನು ಚಂದ್ರಗುಪ್ತನೆಂಬ ಮೌರ್ಯ**<br>ಎಸ್.ಎಸ್. ಎಮ್. ಆರ್.ವಿ ಕಾಲೇಜ್ | ಧನ್ವಿನ್ ಜೋಷಿ<br>ಅಗ್ನಿವರ್ಣ<br>**ಅಗ್ನಿವರ್ಣ**<br>ನ್ಯಾಷನಲ್ ಕಾಲೇಜ್<br>ಬಸವನಗುಡಿ | ದರ್ಶನ್<br>ಮಡಿವಾಳ ಮಾಚಯ್ಯ<br>**ಪ್ರಮೀಳಾರ್ಜುನೀಯಮ್**<br>ನ್ಯಾಷನಲ್ ಕಾಲೇಜ್<br>ಜಯನಗರ |
| ಅತ್ಯುತ್ತಮ ನಟಿ<br>**ಉಮಾಶ್ರೀ**<br>ಪ್ರಶಸ್ತಿ | ಜೀವಿತಾ<br>ಕುಂತಿ<br>**ಸ್ಮಶಾನ ಕುರುಕ್ಷೇತ್ರ**<br>ಸಿ.ಎಂ.ಎಸ್. ಜೈನ್<br>ವಿಶ್ವವಿದ್ಯಾಲಯ | ಸಾನ್ಯಾ ಐಯ್ಯರ್<br>ಅಂಬಿಕಾ<br>**ಆಶಾಢದ ಒಂದು ದಿನ**<br>ದಯಾನಂದ ಸಾಗರ<br>ವಿದ್ಯಾಸಂಸ್ಥೆ | ವರ್ಷಿಣಿ<br>ಸೀತೆ<br>**ಆಶ್ಚರ್ಯ ಚೂಡಾಮಣಿ**<br>ಬಿ.ಎಂ.ಎಸ್. ವಾಣಿಜ್ಯಾ<br>ಮತ್ತು ನಿರ್ವಹಣಾ ಕಾಲೇಜ್ |
| ಅತ್ಯುತ್ತಮ ಪೋಷಕ ನಟ<br>**ಅಚ್ಯುತ್ ಕುಮಾರ್**<br>ಪ್ರಶಸ್ತಿ | ವೇಣು ಕೆ.ಕೆ.<br>ಕಾರವೇಂದ್ರ<br>**ಸ್ಮಶಾನ ಕುರುಕ್ಷೇತ್ರ**<br>ಸಿ.ಎಂ.ಎಸ್. ಜೈನ್<br>ವಿಶ್ವವಿದ್ಯಾಲಯ | ಸಾಗರ್ ನಾಡಿಗ್<br>ಕುಲಾಲ ಕುಂಟ ಶೆಟ್ಟಿ<br>**ಪ್ರಮೀಳಾರ್ಜುನೀಯಮ್**<br>ನ್ಯಾಷನಲ್ ಕಾಲೇಜ್<br>ಜಯನಗರ | ವರ್ಷಿತ್ ಗೌಡ<br>ಸಿಕಂದರ್ ಮಿಶ್ರ<br>**ರಾವಿ ನದಿಯ ದಂಡೆಯಲ್ಲಿ**<br>ಪಿ.ಇ.ಎಸ್. ಕಾಲೇಜ್ |
| ಅತ್ಯುತ್ತಮ ಪೋಷಕ ನಟಿ<br>**ಗಿರಿಜಾ ಲೋಕೇಶ್**<br>ಪ್ರಶಸ್ತಿ | ಧನುಶ್ರೀ<br>ಮೇಳ<br>**ಅಗ್ನಿವರ್ಣ**<br>ನ್ಯಾಷನಲ್ ಕಾಲೇಜ್<br>ಬಸವನಗುಡಿ | ಶ್ವೇತಾ<br>ಸುಮ್ಮಿ<br>**ಮಣ್ಣಿನ ಕಥೆ**<br>ಕ್ರೈಸ್ಟ್ ವಿಶ್ವವಿದ್ಯಾಲಯ | ನಮ್ರತಾ<br>ಶೂರ್ಪಣಖಾ<br>**ಆಶ್ಚರ್ಯ ಚೂಡಾಮಣಿ**<br>ಬಿ.ಎಂ.ಎಸ್. ವಾಣಿಜ್ಯಾ<br>ಮತ್ತು ನಿರ್ವಹಣಾ ಕಾಲೇಜ್ |

## ಪ್ರಶಸ್ತಿ

| | | |
|---|---|---|
| ಅತ್ಯುತ್ತಮ ಪ್ರಚಾರ ಕಲೆ ರಂಗಸೌರಭ ಪ್ರಶಸ್ತಿ | ಅಗ್ನಿವರ್ಣ | ನ್ಯಾಷನಲ್ ಕಾಲೇಜ್, ಬಸವನಗುಡಿ |
| ಅತ್ಯುತ್ತಮ ಸಂಗೀತ ಬಿ.ವಿ. ಕಾರಂತ ಪ್ರಶಸ್ತಿ | ಮಾರುತಿ ವಿಜಯ | ಎಂ.ಇ.ಎಸ್ ಕಾಲೇಜ್ |
| ಅತ್ಯುತ್ತಮ ರಂಗಸಜ್ಜಿಕೆ ಶಶಿಧರ ಅಡಪ ಪ್ರಶಸ್ತಿ | ನಾನು ಚಂದ್ರಗುಪ್ತನೆಂಬ ಮೌರ್ಯ | ಎಸ್.ಎಸ್.ಎಂ.ಆರ್.ವಿ. ಕಾಲೇಜ್ |
| ಅತ್ಯುತ್ತಮ ಬೆಳಕು ವಿ. ರಾಮಮೂರ್ತಿ ಪ್ರಶಸ್ತಿ | ರಾವಿ ನದಿಯ ದಂಡೆಯಲ್ಲಿ | ಪಿ.ಇ.ಎಸ್ ಕಾಲೇಜ್ |
| ಅತ್ಯುತ್ತಮ ರಂಗಪರಿಕರ ಕೃಷ್ಣ ಮೂರ್ತಿ ಕವತ್ತಾರ್ ಪ್ರಶಸ್ತಿ | ಆಶಾಢದ ಒಂದು ದಿನ | ದಯಾನಂದ ಸಾಗರ ಸಂಸ್ಥೆ |
| ಅತ್ಯುತ್ತಮ ಪ್ರಸಾದನ ಗ್ರೀನ್ ರೂಮ್ ನಾಣಿ ಪ್ರಶಸ್ತಿ | ನಾನು ಚಂದ್ರಗುಪ್ತನೆಂಬ ಮೌರ್ಯ | ಎಸ್.ಎಸ್.ಎಂ.ಆರ್.ವಿ. ಕಾಲೇಜ್ |
| ಅತ್ಯುತ್ತಮ ವಸ್ತ್ರ ವಿನ್ಯಾಸ ಪ್ರಮೋದ್ ಶಿಗ್ಗಾಂವ್ ಪ್ರಶಸ್ತಿ | ಆಶ್ಚರ್ಯ ಚೂಡಾಮಣಿ | ಬಿ.ಎಂಎಸ್. ಕಾಲೇಜ್ |
| ಅತ್ಯುತ್ತಮ ಪೋಸ್ಟರ್ ಆರ್. ಎಮ್. ಹಡ್ ಪದ್ ಪ್ರಶಸ್ತಿ | ರಾವಿ ನದಿಯ ದಂಡೆಯಲ್ಲಿ | ಪಿ.ಇ.ಎಸ್ ಕಾಲೇಜ್ |
| ಭಾಷಾ ಶುದ್ಧತೆ ಸಂಚಯ ಜಿ.ಎಸ್. ರಾಮರಾವ್ ಪ್ರಶಸ್ತಿ | ಸ್ಮಶಾನ ಕುರುಕ್ಷೇತ್ರ | ಸಿ.ಎಂ.ಎಸ್. ಜೈನ್ ವಿಶ್ವವಿದ್ಯಾಲಯ |
| ಅತ್ಯುತ್ತಮ ರಂಗ ವಿನ್ಯಾಸ ಮೊಹಮ್ಮದ್ ಮುಸ್ತಫಾ ಪ್ರಶಸ್ತಿ | ಪ್ರಮೀಳಾರ್ಜುನೀಯಮ್ | ನ್ಯಾಷನಲ್ ಕಾಲೇಜ್, ಜಯನಗರ |
| ಅತ್ಯುತ್ತಮ ನಿರ್ದೇಶನ ಪ್ರಸನ್ನ ಹೆಗ್ಗೋಡು ಪ್ರಶಸ್ತಿ | ಪ್ರಮೀಳಾರ್ಜುನೀಯಮ್ | ನ್ಯಾಷನಲ್ ಕಾಲೇಜ್, ಜಯನಗರ |

## ಪಾರಿತೋಷಕ

| | | |
|---|---|---|
| ಬಿ.ಕೆ.ಲೋಕಪ್ಪ ಗೌಡ ಚರ್ಚಾ ಸ್ಪರ್ಧೆ ಪಾರಿತೋಷಕ | ಎಂ.ಇ.ಎಸ್ ಕಾಲೇಜ್ | |
| ಪ್ರೊ. ಕಿ.ರಂ. ನಾಗರಾಜ್ ಪ್ರಬಂಧ ಪಾರಿತೋಷಕ | ನ್ಯಾಷನಲ್ ಕಾಲೇಜ್, ಬಸವನಗುಡಿ | |
| ಚನ್ನವೀರಮ್ಮ ಗಂಗಣ್ಣ ಏಕಪಾತ್ರಾಭಿನಯ ಪಾರಿತೋಷಕ | ಎಸ್.ಎಸ್.ಎಂ.ಆರ್.ವಿ. ಕಾಲೇಜ್ | |
| ಕನ್ನಳ್ಳಿ ಮಹಾದೇವಯ್ಯ ಮೂಕಾಭಿನಯ ಪಾರಿತೋಷಕ | ನ್ಯಾಷನಲ್ ಕಾಲೇಜ್, ಬಸವನಗುಡಿ | |
| ಜಿ.ವಿ. ಅತ್ರಿ ಸಂಗೀತ ಸ್ಪರ್ಧೆಗಳ ಪಾರಿತೋಷಕ | ನ್ಯಾಷನಲ್ ಕಾಲೇಜ್, ಜಯನಗರ | |
| ಪದ್ಮಭೂಷಣ ವೆಂಕಟಲಕ್ಷ್ಮಮ್ಮ ನೃತ್ಯ ಪಾರಿತೋಷಕ | ನ್ಯಾಷನಲ್ ಕಾಲೇಜ್, ಬಸವನಗುಡಿ | |
| ಕನ್ನಳ್ಳಿ ರುದ್ರಮ್ಮ ವಿರೂಪಾಕ್ಷಯ್ಯ ಹೊರ ಜಿಲ್ಲಾ ನಾಟಕ ಪಾರಿತೋಷಕ | ಬೊಂಬಾಟ್ ಬೀಚಿ | ವಿಜಯ ಪಿ.ಆರ್.ಎಂ ಕಾಲೇಜ್ ಟಿ. ನರಸೀಪುರ |
| ಸ್ನೇಹಸಮೂಹ ರಂಗಶಿಸ್ತು ಪಾರಿತೋಷಕ | ಅಂಗುಲಿ ಮಾಲ | ಎಂ.ಎಸ್. ಕಾಲೇಜ್ |

| | | |
|---|---|---|
| **ಶಂಕರ್ ನಾಗ್ ತೃತೀಯ ನಾಟಕ ಪಾರಿತೋಷಕ** | **ಅಗ್ನಿವರ್ಣ** | **ನ್ಯಾಷನಲ್ ಕಾಲೇಜ್, ಬಸವನಗುಡಿ** |
| **ಪ್ರಯೋಗ ರಂಗ ದ್ವಿತೀಯ ನಾಟಕ ಪಾರಿತೋಷಕ** | **ಪ್ರಮೀಳಾರ್ಜುನೀಯಮ್** | **ನ್ಯಾಷನಲ್ ಕಾಲೇಜ್, ಜಯನಗರ** |
| **ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಅತ್ಯುತ್ತಮ ನಾಟಕ ಪಾರಿತೋಷಕ** | **ಸ್ಮಶಾನ ಕುರುಕ್ಷೇತ್ರ** | **ಸಿ.ಎಂ.ಎಸ್. ಜೈನ್ ವಿಶ್ವವಿದ್ಯಾಲಯ** |

| | |
|---|---|
| **ಪದ್ಮಭೂಷಣ ಡಾ. ಹೆಚ್. ನರಸಿಂಹಯ್ಯ ತೃತೀಯ ಸರ್ವೋತ್ತಮ ಪಾರಿತೋಷಕ** | **ಪಿ.ಇ.ಎಸ್ ಕಾಲೇಜ್** |
| **ಉಮೇಶ್ ರುದ್ರ ಸರ್ವೋತ್ತಮ ದ್ವಿತೀಯ ಪಾರಿತೋಷಕ** | **ನ್ಯಾಷನಲ್ ಕಾಲೇಜ್, ಜಯನಗರ** |
| **ಜ್ಞಾನಭಾರತಿ ಸರ್ವೋತ್ತಮ ಪಾರಿತೋಷಕ** | **ನ್ಯಾಷನಲ್ ಕಾಲೇಜ್, ಬಸವನಗುಡಿ** |

## 02 ಭಾನುವಾರ ಸಂಸ ಬಯಲು ರಂಗಮಂದಿರ

| | |
|---|---|
| ಉದ್ಘಾಟನಾ ಸಮಾರಂಭ | 05:30 pm |
| ಜಾನಪದ ವೃಂದಗಾಯನ | 07:00 pm |

# ಅಂತರ ಕಾಲೇಜು ರಂಗ ಸ್ಪರ್ಧೆ

2020 ಫೆಬ್ರವರಿ

## ರವೀಂದ್ರ ಕಲಾಕ್ಷೇತ್ರ

### 03 ಸೋಮವಾರ

**ಅಗ್ನಿವರ್ಣ**
ನ್ಯಾಷನಲ್ ಕಾಲೇಜು, ಬಸವನಗುಡಿ.
09:00 am
10:30 am

**ಭೀಮನ ಪ್ರತಿಜ್ಞೆ**
ಶೇಷಾದ್ರಿಪುರಂ ವಾಣಿಜ್ಯ ಕಾಲೇಜು
ಮಾಗಡಿ ರಸ್ತೆ.
11:00 am
12:00 pm

**ಆಶ್ಚರ್ಯ ಚೂಡಾಮಣಿ**
ಬಿ.ಎಂ.ಎಸ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು.
12:30 pm
01:30 pm

**ಋಣ**
ಕೆ.ಎಲ್.ಇ ಕಾಲೇಜು.
02:00 pm
03:30 pm

### 04 ಮಂಗಳವಾರ

**ಸ್ಮಶಾನ ಕುರುಕ್ಷೇತ್ರ**
ಸಿ.ಎಂ.ಎಸ್ ಜೈನ್ ವಿಶ್ವವಿದ್ಯಾಲಯ.
09:00 am
10:30 am

**ಮಣ್ಣಿನ ಕಥೆ**
ಕ್ರೈಸ್ಟ್ (ಡೀಮ್ಡ್ ಟು ಬಿ) ಯೂನಿವರ್ಸಿಟಿ
ಹೊಸೂರು ರಸ್ತೆ.
11:00 am
12:30 pm

**ಹೀಗೂ ಆಗುತ್ತೆ**
ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು.
01:00 pm
02:30 pm

### 05 ಬುಧವಾರ

**ರಾವಿ ನದಿಯ ದಂಡೆಯಲ್ಲಿ**
ಪಿ.ಇ.ಎಸ್ ಕಾಲೇಜು, ಹನುಮಂತನಗರ.
09:00 am
10:30 am

**ಸಂಕ್ರಾಂತಿ**
ಸಂತ ಜೋಸೆಫ್ ವಿಜ್ಞಾನ ಕಾಲೇಜು.
11:00 am
12:30 pm

**ಶೂದ್ರ ತಪಸ್ವಿ**
ಸಿ.ಎಂ.ಆರ್ ಯೂನಿವರ್ಸಿಟಿ.
01:00 pm
02:30 pm

### 06 ಗುರುವಾರ

**ಪ್ರಮೀಳಾರ್ಜುನೀಯಂ**
ನ್ಯಾಷನಲ್ ಕಾಲೇಜು, ಜಯನಗರ.
09:00 am
10:30 am

**ಆಷಾಡದ ಒಂದು ದಿನ**
ದಯಾನಂದ್ ಸಾಗರ್ ಸಂಸ್ಥೆ.
11:00 am
12:30 pm

**ಅಂಗುಲಿಮಾಲ**
ಎಂ.ಎಸ್ ಕಾಲೇಜು.
01:00 pm
02:30 pm

### 07 ಶುಕ್ರವಾರ

**ನಾನು ಚಂದ್ರಗುಪ್ತನೆಂಬ ಮೌರ್ಯ**
ಎಸ್.ಎಸ್.ಎಂ.ಆರ್.ವಿ ಕಾಲೇಜು.
09:00 am
10:30 am

**ಮಾರುತಿ ವಿಜಯ**
ಎಂ.ಇ.ಎಸ್ ಕಾಲೇಜು.
11:00 am
12:30 pm

**ಬೊಂಬಾಟ್ ಬೀಚ**
ವಿಜಯ ಪಿ.ಆರ್.ಎಂ ಕಾಲೇಜು, ಟಿ. ನರಸೀಪುರ.
01:00 pm
02:30 pm

## 03 ಸೋಮವಾರ

| | | |
|---|---|---|
| ಚಿತ್ರಕಲೆ | 10:00 am - 12:00 pm | ವಿಶ್ರಾಂತಿ ಕೊಠಡಿ |

## 04 ಮಂಗಳವಾರ

| | | |
|---|---|---|
| ಸುಗಮ ಸಂಗೀತ ಗಾಯನ | 10:00 am - 12:00 pm | ವಿಶ್ರಾಂತಿ ಕೊಠಡಿ |

## 05 ಬುಧವಾರ

| | | |
|---|---|---|
| ಚರ್ಚಾಸ್ಪರ್ಧೆ | 10:00 am - 01:00 pm | ವಿಶ್ರಾಂತಿ ಕೊಠಡಿ |
| ಏಕಪಾತ್ರಾಭಿನಯ | 10:00 am - 01:00 pm | ವಿಶ್ರಾಂತಿ ಕೊಠಡಿ |

## 06 ಗುರುವಾರ

| | | |
|---|---|---|
| ರಂಗ ರಸ ಪ್ರಶ್ನಾವಳಿ ಪ್ರಿಲಿಮಿನರಿ | 10:00 am - 04:00 pm | ವಿಶ್ರಾಂತಿ ಕೊಠಡಿ |
| ರಂಗ ರಸ ಪ್ರಶ್ನಾವಳಿ ಫೈನಲ್ಸ್ | 05:00 pm - 06:00 pm | ಸಂಸ ಬಯಲು ರಂಗಮಂದಿರ |
| ಮೂಕಾಭಿನಯ | 06:00 pm | ಸಂಸ ಬಯಲು ರಂಗಮಂದಿರ |

## 07 ಶುಕ್ರವಾರ

| | | |
|---|---|---|
| ಪ್ರಬಂಧ | 10:00 am - 11:00 am | ವಿಶ್ರಾಂತಿ ಕೊಠಡಿ |
| ಜಾನಪದ ನೃತ್ಯ | 06:00 pm | ಸಂಸ ಬಯಲು ರಂಗಮಂದಿರ |

## 08 ಶನಿವಾರ

| | | |
|---|---|---|
| ಶಾಸ್ತ್ರೀಯ ನೃತ್ಯ | 09:00 am - 01:00 pm | ನಯನ ರಂಗಮಂದಿರ<br>ಕನ್ನಡ ಭವನ |

**10** ಸೋಮವಾರ

## ಪ್ರಶಸ್ತಿ ಪ್ರದಾನ ಸಮಾರಂಭ

ಸಂಸ ಬಯಲು ರಂಗಮಂದಿರ

**06:00 pm**

## ಸೌರಭ 20 ಉದ್ಘಾಟನಾ ಸಮಾರಂಭ – ೦೨/೦೨/೨೦೨೦




## ಜಾನಪದ ವೃಂದಗಾಯನ – ೦೨/೦೨/೨೦೨೦





ಪ್ರಶಸ್ತಿ ಪುರಸ್ಕೃತರು ಶ್ರೀಮತಿ ಡಾ. ಜಿ. ಆಶಾ ಕನ್ನಡ ಉಪನ್ಯಾಸಕರು, ಕೆ.ಎಲ್.ಇ. ಕಾಲೇಜು, ರಾಜಾಜಿನಗರ. ಡಾ. ಜಿ. ಆಶಾರವರು ಕಾಲೇಜು ರಂಗಭೂಮಿಯಲ್ಲಿ ಕಳೆದ ಹಲವಾರು ವರ್ಷಗಳಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯದ ವಿವಿಧ ಮಗ್ಗಲುಗಳಲ್ಲಿ ಸಾಹಿತ್ಯದ ಕೃಷಿ ಮಾಡಿರುವ ಇವರಿಗೆ 2020ನೇ ಸಾಲಿನ 'ಸಂಸ' ಪ್ರಶಸ್ತಿಯನ್ನು ಡಾ. ಕೆ. ಮರುಳಸಿದ್ದಪ್ಪ , ಟಿ. ಎನ್. ಸೀತಾರಾಮ್ ಮತ್ತು ಜಿ. ಲೋಕೇಶ್ ಅವರ ಸಮ್ಮುಖದಲ್ಲಿ ದಿನಾಂಕ 07/02/2020ರಂದು ರವೀಂದ್ರ ಕಲಾಕ್ಷೇತ್ರದ 'ಸಂಸ ಬಯಲು ರಂಗಮಂದಿರ'ದಲ್ಲಿ ನೀಡಿ ಗೌರವಿಸಿದೆ. ಶ್ರೀಯುತರು ಇನ್ನೂ ಹೆಚ್ಚು ಪ್ರಶಸ್ತಿ ಪುರಸ್ಕಾರಗಳನ್ನು ಗಳಿಸಲಿ ಎಂದು ಹಾರೈಸುತ್ತೇವೆ.




ಕೆ.ವಿ. ನಾಗರಾಜಮೂರ್ತಿ ಹುಟ್ಟಿದ್ದು ಕನ್ನಲ್ಲಿಯಲ್ಲಿ ಓದಿದ್ದು ಭೂಗರ್ಭ ಶಾಸ್ತ್ರ ಮತ್ತು ಔಷಧ ಶಾಸ್ತ್ರ. ಮಾಡಿದ ಸಾಧನೆ ನಾಲ್ಕು ದಶಕಗಳ ರಂಗಕೃಷಿ. ಕಾಲೇಜು ರಂಗಭೂಮಿ ಕರ್ನಾಟಕದಲ್ಲಿ ಬೃಹತ್ತಾಗಿ ಬೆಳೆಯಲು ಕಾರಣ ನಾಗರಾಜಮೂರ್ತಿಯವರು, ಅವರ ಛಲ ಹಠ ಅಂದ್ರೆ ತಪ್ಪಾಗಲ್ಲ. ಕಳೇದ ಮೂರು ದಶಕಗಳಿಂದ ಭಾರತ ಯಾತ್ರಾ ಕೇಂದ್ರದ ಮೂಲಕ ಕರ್ನಾಟಕದ ಕಾಲೇಜುಗಳಲ್ಲಿ ರಂಗ ಚಳುವಳಿ ಮಾಡಿದ್ದಾರೆ.

ಕನ್ನಲ್ಲಿಯಲ್ಲಿ ಅಲ್ಲಮ್ಮ ಶಾಲೆ ತೆರೆದಿದ್ದಾರೆ. ನಾಟಕ ನಿರ್ದೇಶನ ಮಾಡಿದ್ದಾರೆ. ನಾಟಕ ಅಕಾಡೆಮಿ ಸದಸ್ಯರಾಗಿ ಪ್ರಶಸ್ತಿ ಪಡೆದಿದ್ದಾರೆ. ಪ್ರಯೋಗರಂಗದ ಜೊತೆ ದೇಶ – ವಿದೇಶಗಳಲ್ಲಿ ನಾಟಕ ಪ್ರದರ್ಶನ ನೀಡಿದ್ದಾರೆ. ಸಿನಿಮಾ ಟಿವಿ ಎಲ್ಲಾ ಕಡೆ ಇವರ ಮುಖ ಚಿರಪರಿಚಿತ.

ಸೌರಭ 20ಕ್ಕೆ ಒಂದರ್ಥದಲ್ಲಿ ಬೆನ್ನೆಲುಬು ಇವರು. ನಾವು ರಂಗಸೌರಭದ ಹುಡುಗರು ಸೌರಭ 20 ಮಾಡ್ತೀವಿ ಅಂದಾಗ ಬೆನ್ನು ತಟ್ಟಿ ಹಗಲು ರಾತ್ರಿ ದುಡಿದಿದ್ದಾರೆ. ಇದು ಅವರ ನಾಟಕ ಪ್ರೀತಿಗೆ ಸಂಘಟನಾ ಶಕ್ತಿಗೆ ಅತಿ ದೊಡ್ಡ ಸಾಕ್ಷಿ.

ಹವ್ಯಾಸಿ ರಂಗಭೂಮಿ ತಂಡವನ್ನು ಕಟ್ಟಿ ಬೆಳೆಸಿದವರಿಗೆ ಈ ವರ್ಷದಿಂದ ಪ್ರತಿ ವರ್ಷ ರಂಗಸೌರಭ ಕೊಡ್ತಾ ಇರೋವಂಥ ಪ್ರಶಸ್ತಿ ಡಾ. ಡಿ.ಕೆ. ಚೌಟ ಪ್ರಶಸ್ತಿ.

ಈ ಪ್ರಶಸ್ತಿಯನ್ನು ಮೊಟ್ಟ ಮೊದಲ ಬಾರಿಗೆ ನಾಗರಾಜಮೂರ್ತಿ ಅವರಿಗೆ ಕೊಡ್ತಾ ಇರೋದು ನಮ್ಮ ತಂಡದ ಹೆಮ್ಮೆ.

## ಮೂಕಾಭಿನಯ – ೦೬/೦೨/೨೦೨೦




## ಜಾನಪದ ನೃತ್ಯ – ೦೭/೦೨/೨೦೨೦



## ಪಾರಿತೋಷಕ



## ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಅತ್ಯುತ್ತಮ ನಾಟಕ ಪಾರಿತೋಷಕ



## ಪ್ರಯೋಗರಂಗ ದ್ವಿತೀಯ ನಾಟಕ ಪಾರಿತೋಷಕ




## ಶಂಕರ್‌ನಾಗ್ ತೃತೀಯ ನಾಟಕ ಪಾರಿತೋಷಕ



## ಜ್ಞಾನಭಾರತಿ ಸರ್ವೋತ್ತಮ ಪಾರಿತೋಷಕ




## ಉಮೇಶ್ ರುದ್ರ ಸರ್ವೋತ್ತಮ ದ್ವಿತೀಯ ಪಾರಿತೋಷಕ



## ಪದ್ಮಭೂಷಣ ಡಾ॥ ಎಚ್. ನರಸಿಂಹಯ್ಯ ತೃತೀಯ ಸರ್ವೋತ್ತಮ ಪಾರಿತೋಷಕ




## ರಂಗ ಸೌರಭ



# ಕೃತಜ್ಞತೆಗಳು

**ಆರ್. ವಿ. ಪ್ರಭಾಕರ**
(ಡೀನ್ ವಿಜಯ ಕಾಲೇಜು)

**ಶಶಿಧರ್ ಅಡಪ**
(ಕಲಾ ನಿರ್ದೇಶಕರು)

**ಸ್ವರೂಪ್ ಕುಮಾರ್**
(ಸಹ ಮಾಲೀಕರು, ರಾಯಲ್ ಮೀನಾಕ್ಷಿ ಮಾಲ್)

**ಶ್ರೇಯಸ್ ನಾರಾಯಣ್**
(ಎಸ್.ಎನ್, ಕನ್ಸ್ಟ್ರಕ್ಷನ್ಸ್)

**ಅಚ್ಯುತ್ ಕುಮಾರ್**
(ಚಲನಚಿತ್ರ ನಟ)

**ರಾಮೋಜಿ ಗೌಡ**
(ಬಿ.ಎಸ್.ಆರ್. ಡೆವಲಪರ್ಸ್)

**ಪ್ರದೀಪ್ ಶೆಟ್ಟಿ**
(ಸೀ–ವಿಲ್ ಕನ್ಸ್ಟ್ರಕ್ಷನ್ಸ್)

**ಸಂತೋಷ್ ಕುಮಾರ್**
(ಚಲನಚಿತ್ರ ನಿರ್ಮಾಪಕರು)

**ಕೆ.ಎಸ್.ಆರ್.ಟಿ.ಸಿ. ನಾಗರಾಜ್**
(ರಂಗಕರ್ಮಿ)

**ಬೃಂದಾವನ ಆಸ್ಪತ್ರೆ**

**ಶ್ರೀ ಗೋಪಾಲ್ ಮೇಲಾಡಿ ಮತ್ತು ಶ್ರೀಮತಿ ಸುವರ್ಣ ಮೇಲಾಡಿ**

**ಪವನ್**
(ಮಜಾ ಟಾಕೀಸ್)

**ಕೃಷ್ಣ ಹೆಬ್ಬಾಳೆ**
(ಸಂಚಯ ತಂಡ, ಬೆಂಗಳೂರು)

**ಶ್ರೀಧರ್ ಮೂರ್ತಿ**
(ಕಲಾ ನಿರ್ದೇಶಕರು)

**ವಿನಯ್ ಶಾಸ್ತ್ರಿ**
(ವಾಸ್ಪ್ ತಂಡ, ಬೆಂಗಳೂರು)

**ಅಶೋಕ್ ಬಾಬು**

**ಡಿ. ಸಿ. ಜಯಶಂಕರ್**
(ದುರ್ಗಂ ಕುಟುಂಬ)

**ಉಮೇಶ್**
(ಅರ್ಕ ಲೈಟ್ಸ್ ಮತ್ತು ಸೌಂಡ್ಸ್)

**ರವೀಂದ್ರ ಕಲಾಕ್ಷೇತ್ರ ಸಿಬ್ಬಂದಿ**

**ವೆಂಕಟೇಶ್**

**ಉತ್ಸವದಲ್ಲಿ ಭಾಗವಹಿಸಿದ ಎಲ್ಲಾ ಕಾಲೇಜು ಅಧ್ಯಾಪಕ ವರ್ಗ ಮತ್ತು ಆಡಳಿತ ವರ್ಗ**

**ರಂಗ ಸೌರಭ ಗೆಳೆಯರು**

Rishab Shetty

FILMS

92.7 BIG FM

ಯೋಚನೆ ಯಾಕೆ
change ಓಕೆ

PLANOTECH™

Events & Marketing (OPC) Pvt. Ltd.




www.rangasourabha.com